ಶಿವಾನುಭವ ಗ್ರಂಥಮಾಲಾ ನಂ|| ೪೮.

ಶಿವಶರಣರ

# ಸಂಗೀತ ವಚನಗಳು.

ಪ್ರಕಾಶಕರು

ರಾ. ಸಾ. ಪಿ. ಜಿ. ಹಳಕಟ್ಟಿ

ವಿ ಜಾ ಪು ರ.

೧೯೪೦.

ಬೆಲೆ ೧ ಆಣೆ.

Halkatti S.B.

ಶಿವಾನುಭವ ಗ್ರಂಥಮಾಲಾ ನಂ|| ೪೮.

# ಶಿವಶರಣರ
# ಸಂಗೀತ ವಚನಗಳು.

ಪ್ರಕಾಶಕರು

ರಾ. ಸಾ. ಪಿ. ಜಿ. ಹಳಕಟ್ಟಿ

ವಿಜಾಪುರ.

೧೯೪೦.

ಬೆಲೆ ೧ ಆಣೆ.

Halkatti 3.13

ಇದನ್ನು ವಿಜಾಪುರದಲ್ಲಿ ರಾ॥ ಸಾ॥ ಫ. ಗು. ಹಳಕಟ್ಟಿ ಇವರು ತಮ್ಮ "ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿ"ನಲ್ಲಿ ಮುದ್ರಿಸಿದರು. ಮತ್ತು ಅವರು ವಿಜಾಪುರದಲ್ಲಿ ತಮ್ಮ ೧೬೨೦ (ಅ) ಮನೆಯಲ್ಲಿ ಪ್ರಸಿದ್ಧಿಸಿದರು.

# ಪ್ರಸ್ತಾವನೆ.

ಈ ಪುಸ್ತಕದಲ್ಲಿ ಅಚ್ಚಾದ ಸಂಗೀತ ವಚನಗಳು ಶಿವಾನುಭವ ಪತ್ರಿಕೆಯಲ್ಲಿ ಮೊದಲು ಪ್ರಸಿದ್ಧಿಸಲ್ಪಟ್ಟವು. ಅವುಗಳನ್ನು ಪುಸ್ತಕ ರೂಪವಾಗಿ ಪ್ರಸಿದ್ಧಿಸಬೇಕೆಂದು ಬಹು ಜನರು ಸೂಚಿಸಿದ್ದರಿಂದ ಆ ಮೇರೆಗೆ ಅವುಗಳು ಈಗ ಪ್ರಕಟಿಸಲ್ಪಟ್ಟಿರುತ್ತವೆ. ಈ ವಚನಗಳನ್ನು ರಾ. ರಾ. ಪಿ. ವ್ಹಿ. ಪಾಟೀಲ ಸಂಗೀತ ಶಿಕ್ಷಕ ವಿಜಾಪೂರ ಇವರು ಸಂಗೀತಕ್ಕೆ ಹೊಂದಿಸಿದ್ದಾರೆ. ಈ ಕಾರ್ಯದಲ್ಲಿ ಅವರಿಗೆ ಶ್ರೀ ಸಿದ್ಧೇಶ್ವರ ಹಾಯಸ್ಕೂಲಿನ ಶಿಕ್ಷಕರಾದ ರಾ॥ ರಾ॥ ಎಂ. ಎಸ್. ಮಿಣಜಗಿ ಬಿ. ಎ. ಬಿ. ಟಿ. ಮತ್ತು ರಾ॥ ರಾ॥ ಟಿ. ಜಿ. ಹಿರೇಮಠ ಬಿ. ಎ. ಬಿ. ಟಿ. ಇವರೂ ಕೂಡ ವಿಶೇಷ ಸಹಾಯಕರಾಗಿ ಪ್ರಯತ್ನಿಸಿದ್ದಾರೆ. ಇದಕ್ಕೋಸ್ಕರ ನಾವು ಈ ಮೂವರನ್ನು ಅತ್ಯಂತವಾಗಿ ಅಭಿನಂದಿಸುತ್ತೇವೆ.

ರಾ॥ ರಾ॥ ಪಿ. ವ್ಹಿ. ಪಾಟೀಲ ಇವರು ವಿಜಾಪುರದ ಶ್ರೀ ಸಿದ್ಧೇಶ್ವರ ಹಾಯಸ್ಕೂಲಿನಲ್ಲಿ ಶಿಕ್ಷಕರಾಗಿ ನಿಯಮಿಸಲ್ಪಟ್ಟಿದ್ದರು. ಅವರು ಪಠ್ಯ ಪುಸ್ತಕಗಳಲ್ಲಿ ಇರುವ ಕವಿತೆಗಳನ್ನಷ್ಟೇ ಅಲ್ಲ, ಈ ಪುಸ್ತಕದಲ್ಲಿಯ ಸಂಗೀತ ವಚನಗಳನ್ನೂ ಕೂಡ ವಿದ್ಯಾರ್ಥಿಗಳಿಗೆ ಕಲಿಸುತ್ತಾ ಇದ್ದರು. ಆಗ ವಿದ್ಯಾರ್ಥಿಗಳು ಈ ವಚನಗಳನ್ನು ಅತ್ಯಂತ ಪ್ರೀತಿಪೂರ್ವಕವಾಗಿ ಅನ್ನುತ್ತಿರುವದು ತೋರಿಬಂದಿರುತ್ತದೆ. ಇದರಿಂದ ಇವು ಹೆಚ್ಚಿಗೆ ಲೋಕಪ್ರಿಯವಾಗಬಹುದೆಂದು ನಾವು ಭಾವಿಸುತ್ತೇವೆ.

ಶಿವಶರಣರು ಕರ್ನಾಟಕದಲ್ಲಿ ಒಂದು ಕಾಲದಲ್ಲಿ ನೈತಿಕ ಮತ್ತು ಧಾರ್ಮಿಕ ಉಚ್ಚ ವಿಚಾರಗಳನ್ನು ಹೊರಗೆಡವಿದ್ದಾರೆ. ಇದರಲ್ಲಿ ಅವರು ನೈತಿಕ ವರ್ತನೆಯನ್ನೇ ಮುಖ್ಯ ತಳಹದಿಯಾಗಿ ಇಟ್ಟುಕೊಂಡು ಎಲ್ಲರಲ್ಲಿಯೂ ಸಮಭಾವವನ್ನು ಬೀರಿದ್ದಾರೆ. ಇಂಥ ಅವರ ನುಡಿಗಳನ್ನು ಸಣ್ಣ ದೊಡ್ಡವರಲ್ಲಿಯೂ ಸ್ತ್ರೀಪುರುಷರಲ್ಲಿಯೂ ಸಾರ್ವತ್ರಿಕವಾಗಿ ಪ್ರಚಾರಪಡಿಸುವದರಿಂದ ಸಮಾಜದಲ್ಲಿ ಉಚ್ಚತರದ ಪರಿಣಾಮಗಳು ಉಂಟಾಗದೆ ಇರವು. ಅವರ ವಿಚಾರಗಳನ್ನು ಸಂಗೀತ ದ್ವಾರಾ ಪ್ರಸಾರಪಡಿಸುವದು ಹೆಚ್ಚಿಗೆ ಅನುಕೂಲವಾಗಿರುವದರಿಂದ ಈ ಪ್ರಯತ್ನದಲ್ಲಿ ಸರ್ವರೂ ಸಹಕರಿಸುವರೆಂದು ನಾವು ಆಶಿಸಿದ್ದೇವೆ.

ವಚನಕಾರರು ತಮ್ಮ ಸ್ಫೂರ್ತಿಯ ಲಹರಿಯಲ್ಲಿ ತಮ್ಮ ನುಡಿಗಳನ್ನು ನುಡಿದದ್ದಾಗಿ ತೋರುತ್ತದೆ. ಇಂಥ ಸಮಯದಲ್ಲಿ ಮನುಷ್ಯನ ಮಾತಿನಲ್ಲಿ ಸ್ವಾಭಾವಿಕವಾಗಿಯೇ ಒಂದು ಕವಿತ್ವ ಶಕ್ತಿಯು ಉತ್ಪನ್ನವಾಗಿ ಅದು ಅವನ ನುಡಿಗಳಲ್ಲಿ ತಾನಾಗಿಯೇ ತಲೆದೋರುವಂತೆ ತೋರುತ್ತದೆ. ಈ ಸಂಗತಿಯನ್ನು ಈ ಪುಸ್ತಕದಲ್ಲಿರುವ ವಚನಗಳಲ್ಲಿ ಕಾಣಬಹುದು.

ಸಂಗೀತದ ಉದ್ದೇಶವು ಒಂದು ನುಡಿಯ ಭಾವವನ್ನು ನಿಚ್ಚಳವಾಗಿಯೂ ದೃಢವಾಗಿಯೂ ಮನಸ್ಸಿನಲ್ಲಿ ಮೂಡಿಸುವದೇ ಇರತಕ್ಕದ್ದು. ಹೀಗೆ ಮಾಡದೆ ಬರೇ ರಾಗದ ವೈಖರಿಯನ್ನು ತೋರಿಸಿದಲ್ಲಿ ಅದರಿಂದ ಮನರಂಜನೆಯಾಗಬಹುದು. ಆದರೆ ಅದು ಉದ್ಬೋಧಕವಾಗವಾಗಲಾರದು. ಆದ್ದರಿಂದ ಅರ್ಥವನ್ನು ಬಿಂಬಿಸುವದನ್ನೇ ಮುಖ್ಯೋದ್ದೇಶವಾಗಿ ಇಟ್ಟುಕೊಂಡು ಅದಕ್ಕೆ ಸಂಗೀತವು ಸಹಕಾರಿಯಾದಲ್ಲಿ ಅದು ಮನಸ್ಸಿನ ಮೇಲೆ ವಿಶೇಷ ಪರಿಣಾಮವನ್ನುಂಟುಮಾಡದೆ ಇರದು. ಈ ರೀತಿಯಾಗಿ ಈ ವಚ



ನಗಳನ್ನು ಹಾಡಿದ್ದಾದರೆ, ಅವು ಬಹಳ ಉದ್ಬೋಧಕವಾಗುವವೆಂದು ನಾವು ಹಾರೈಸಿದ್ದೇವೆ.

ಈ ವಚನಗಳನ್ನು, ಸಂಗೀತಕ್ಕೆ ಹೊಂದಿಸುವಲ್ಲಿ ಮೂಲ ವಚನಗಳಲ್ಲಿ ಬದಲಾವಣೆ ಮಾಡಿದ್ದು ಅತ್ಯಲ್ಪವಾಗಿರುತ್ತದೆ. ಬಹುಶಃ ಇಲ್ಲನೆಂದು ಹೇಳಿದರೂ ಸಲ್ಲುವದು. ಹೀಗೆ ಮಾಡುವದು ಅವಶ್ಯವೆಂದು ನಮಗೆ ತೋರುತ್ತದೆ. ಯಾಕಂದರೆ ವಚನಗಳ ಪದಗಳನ್ನು ವ್ಯತ್ಯಾಸ ಮಾಡಿದಲ್ಲಿ ಭಾವಕ್ಕೆ ಕುಂದು ಬರುವದಲ್ಲದೆ ಅವುಗಳಲ್ಲಿ ಸ್ವಾಭಾವಿಕವಾಗಿ ಹರಿಯುವ ವಿಚಾರ ಪ್ರವಾಹಕ್ಕೂ ತಡೆಯುಂಟಾಗುತ್ತದೆ. ಆದುದರಿಂದ ಅವುಗಳನ್ನು ಮೂಲದಲ್ಲಿದ್ದ ಹಾಗೆಯೇ ಇಟ್ಟಿರುತ್ತದೆ.

ಈ ಹಾಡುಗಳು ಗಾಯನಶಾಸ್ತ್ರದ ನಿಯಮಗಳಿಗೆ ಅಷ್ಟು ಹೊಂದಿಕೆಯಾದವುಗಳಲ್ಲೆಂದು ಅದರ ತಜ್ಞರು ನುಡಿಯಬಹುದು. ಆದರೆ ಎಲ್ಲಿ ಸಹಜ ಭಾವವೂ, ಸ್ಫೂರ್ತಿಯೂ, ಇರುತ್ತವೆಯೋ ಅಲ್ಲಿ ಸೌಂದರ್ಯವೂ ಇರುತ್ತದೆ. ವಚನಗಳಿಗೆ ಗೀತಗಳೆಂದು ಹರಿಹರ ಮೊದಲಾದ ಕವಿಗಳೂ ವಚನಕಾರರೂ ಅಂದಿದ್ದಾರೆ. ಆದ್ದರಿಂದ ಒಂದು ಧಾಟಿಯಿಂದ ಇವುಗಳನ್ನು ಅನ್ನುವ ಪದ್ಧತಿಯು ಪೂರ್ವ ಕಾಲದಲ್ಲಿ ಇದ್ದಿರಬೇಕೆಂದು ನಮಗೆ ತೋರುತ್ತದೆ. ಆದರೆ ಅದರ ಪರಿಚಯವು ಜನರಿಗೆ ಈಗ ಇಲ್ಲ. ಆದ್ದರಿಂದ ಇವುಗಳನ್ನು ಅನ್ನುವ ಪದ್ಧತಿಯನ್ನು ನಾವು ಈಗ ಹೊಸದಾಗಿ ಕಂಡುಹಿಡಿಯಬೇಕಾಗಿದೆ. ಈ ಕಾರ್ಯದಲ್ಲಿ ಇದೊಂದು ಪ್ರಥಮ ಪ್ರಯತ್ನವೆಂದು ವಾಚಕರು ತಿಳಿಯಬೇಕು. ೧೯೩೮ನೇ ಇಸ್ವಿಯಲ್ಲಿ ೩೨ ವಚನಗಳುಳ್ಳ ಒಂದು ಪುಸ್ತಕವನ್ನು ನಾವು ಮೊದಲು ಪ್ರಸಿದ್ಧಿಸಿದೆವು. ಈ ಸ್ವಲ್ಪ ಅವಧಿಯಲ್ಲಿಯೇ ವಚನಗಳನ್ನು ಸಂಗೀತದಿಂದ ಅನ್ನುವ ಪದ್ಧ

ತಿಯು ಎಲ್ಲ ಕಡೆಗೂ ಒತ್ತರದಿಂದ ಪಸರಿಸಹತ್ತಿರುತ್ತದೆ. ಗ್ರಾಮೋಫೋನ ರಿಕಾರ್ಡುಗಳಲ್ಲಿಯೂ ಇವು ಸೇರಿಸಲ್ಪಡಹತ್ತಿವೆ. ಸಭಾಕಾಲಗಳಲ್ಲಿಯೂ ರೇಡಿಯೋಗಳಲ್ಲಿಯೂ ಕೂಡ, ಇವುಗಳು ಅನ್ನಲ್ಪಡುತ್ತಲಿವೆ.

ಈಗ ನಾವು ಈ ಗ್ರಂಥದಲ್ಲಿ ೭೫ ವಚನಗಳನ್ನು ಸಂಗ್ರಹಿಸಿದ್ದೇವೆ. ಇದರಿಂದ ಇವುಗಳ ಪ್ರಚಾರವು ಸಮಾಜದಲ್ಲಿ ಇನ್ನೂ ಹೆಚ್ಚಾಗಿ ಆಗುವದೆಂದು ನಾವು ಹಾರೈಸಿದ್ದೇವೆ.

Halakatti. S. B.

ವಿಜಾಪುರ.
೧೫-೧೦-೪೦.

ಫ. ಗು. ಹಳಕಟ್ಟಿ
ಸಂಪಾದಕ

# ಸಂಗೀತದಲ್ಲಿ ಶಿವಶರಣರ ವಚನಗಳು.

೧

ರಾಗ— ಭೀಮಪಲಾಸ) (ತಾಲ— ಏಕತಾಲ

[ತಿಮಿರ ಪಟಲ......ಎಂಬಂತೆ]

ಗಿರಿಯಲ್ಲದೆ ಹುಲ್ಲು ಮೊರಡಿ। ಯಲ್ಲಾಡುವುದೇ ನವಿಲು।
ಕೊಳನಲ್ಲದೆ। ಕಿರಿವಳ್ಳಕ್ಕೆಳಸುವುದೆ ಹಂಸೆ ॥ ಪ ॥
ಮಾಮರ ತಳಿತಲ್ಲದೆ। ಸ್ವರಗೈವುದೆ ಕೋಗಿಲೆ।
ಪರಿಮಳವಿಲ್ಲದ ಪುಷ್ಪ। ಕ್ಕೆಳಸುವುದೆ ಭ್ರಮರ ॥ ೧ ॥
ಎನ್ನಯ ದೇವ ಚೆನ್ನ। ಮಲ್ಲಿಕಾರ್ಜುನನಲ್ಲದೆ।
ಅನ್ಯಕ್ಕೆಳಸುವುದೆ ಎನ್ನ। ಮನ ಕೇಳಿರೆ ಕೆಳದಿಯರಾ ॥ ೨ ॥

(ಅಕ್ಕಮಹಾದೇವಿ)

೨

ರಾಗ— ದುರ್ಗಾ) (ತಾಲ— ತ್ರಿತಾಲ

[ಪ್ರೀತಿ ಮೇ ಮನ......ಎಂಬಂತೆ]

ಬೆಟ್ಟದ ಮೇಲೊಂದು ಮನೆಯ ಮಾಡಿ।
ಮೃಗಂಗಳಿಗಂಜಿ। ದರೆ ಎಂತಯ್ಯಾ ॥ ಪ ॥

ಸಮುದ್ರದ ತಡೆಯಲ್ಲಿ। ಮನೆಯ ಮಾಡಿ।
ನೊರೆ ತೊರೆಗಳಿಗಂಜಿ। ದರೆ ಎಂತಯ್ಯ ॥ ೧ ॥
ಸಂತೆಯೊಳಗೊಂದು। ಮನೆಯ ಮಾಡಿ।
ಶಬ್ದಕ್ಕೆ ನಾಚಿದರೆ। ಎಂತಯ್ಯ ॥ ೨ ॥
ಚೆನ್ನಮಲ್ಲಿಕಾರ್ಜುನ। ದೇವ ಕೇಳಯ್ಯ।
ಲೋಕದೊಳಗೆ ಹು। ಟ್ಟಿರ್ದ ಬಳಿಕ ॥ ೩ ॥
ಸ್ತುತಿ ನಿಂದೆಗಳು। ಬಂದರೆ ಮನದಲ್ಲಿ।
ಕೋಪವ ತಾಳದೆ। ಸಮಾಧಾನಿಯಾಗಿರು ॥ ೪ ॥

(ಅಕ್ಕಮಹಾದೇವಿ)

೩

ರಾಗ— ಮುಲ್ತಾನಿ) (ತಾಲ— ಏಕತಾಲ

[ಗೋವಿಂದಸೋ...... ಎಂಬಂತೆ]

ಬಂಜೆಯು। ಬೇನೆಯನರಿಯಳು।
ಬಲತಾಯಿ ಮುದ್ದ ಬಲ್ಲಳೇ ॥ ಪ ॥
ನೊಂದ ನೋವ ನೋಯದವರು।
ಎತ್ತ ಬಲ್ಲರೌ ತಾಯೇ ॥ ೧ ॥
ಚೆನ್ನಮಲ್ಲಿಕಾರ್ಜುನ ನೀ।
ನಿರಿದಲಗೊಡಲಲ್ಲಿ ಮುರಿದು ॥ ೨ ॥
ಹೊರಳುವಳ ನೀವೆತ್ತ।
ಬಲ್ಲಿರೆ ಎಲೆ ತಾಯಿಗಳಿರಾ ॥ ೩ ॥

(ಅಕ್ಕಮಹಾದೇವಿ)



೪

ರಾಗ— ದೇಸಕರ) (ತಾಲ— ತ್ರಿತಾಲ

[ಸದಾ ಕಲಹಾ ವಿನಾ .... ಎಂಬಂತೆ]

ಚಂದನವ ಕಡಿದು ಕೊರೆದು। ತೇದೊಡೆ।
ನೊಂದೆನೆಂದು ಕಂಪ ಬಿಟ್ಟಿತ್ತೆ ॥ ಪ ॥
ತಂದು ಸುವರ್ಣವ ಕಡಿದೊರೆದೊಡೆ ಬೆಂದು।
ಕಳಂಕ ಹಿಡಿದಿತ್ತೆ ಸಂದು ಸಂದು ಕಡಿದ।
ಕಬ್ಬನು ಗಾಣದಲಿಕ್ಕಿ ಬೆಂದು ॥ ೧ ॥
ಪಾಕಾಗುಳ್ಳ ಸಕ್ಕರೆಯಾಗಿ ನೊಂದೆ।
ನೆಂದು ಸವಿಯ ಬಿಟ್ಟಿತ್ತೆ ನಾ ಹಿಂದೆ।
ಮಾಡಿದ ಹೀನಂಗಳೆಲ್ಲವ ತಂದು ॥ ೨ ॥
ಮುಂದೆ ಇಃಹಲು ನಿಮಗೆ ಹಾನಿಯೆ।
ಎನ್ನಯ ತಂದೆ ಚೆನ್ನಮಲ್ಲಿಕಾರ್ಜುನ।
ದೇವಯ್ಯ ಕೊಂದೊಡೆ ಶರಣೆಂಬುದ ಮಾಣೆ ॥ ೩ ॥

(ಅಕ್ಕಮಹಾದೇವಿ)

೫

ರಾಗ— ಯಮುನ) (ತಾಲ—ತ್ರಿತಾಲ

[ಲಾಗೆ ಹೃದಯು...... ಎಂಬಂತೆ]

ವನವೆಲ್ಲ ನೀವೆ ವನದೊಳಗಣ। ದೇವ ॥
ತರುವೆಲ್ಲ ನೀವೆ। ತರುವಿನೊಳಗಾಡುವ ॥ ಪ ॥

ಖಗ ಮೃಗವೆಲ್ಲ ನೀವೆ । ಚೆನ್ನಮಲ್ಲಿಕಾರ್ಜುನ ।
ಸರ್ವಭರಿತನಾಗಿ । ಎನಗೆ ಮುಖದೋರ ॥ ೧ ॥

(ಅಕ್ಕಮಹಾದೇವಿ)

೩

ರಾಗ– ಭೂಪ) (ತಾಲ– ತ್ರಿತಾಲ

[ತುಮಹಮಸಂಗಜಿನ... ಎಂಬಂತೆ]

ವೃಕ್ಷಾಶ್ರಿತನಾಗಿರ್ದೊಡೇನು ।
ಭಿಕ್ಷಾಹಾರಿಯಾಗಿರ್ದೊಡೇನು ॥ ಪ ॥

ಉಟ್ಟುದ ತೊರೆದು ಬತ್ತಲೆಯಾಗಿರ್ದೊಡೇನು ।
ಕಾಲವಿರಹಿತನಾದೊಡೇನು ।
ಕರ್ಮವಿರಹಿತನಾದೊಡೇನು ॥ ೧ ॥

ನಮ್ಮ ಕೂಡಲಚನ್ನಸಂಗಯ್ಯನನು ।
ಭಾವವನರಿಯದವರು ಏಸು ಕಾಲ ।
ಇರ್ದೊಡೆಯು ವೃಥಾ ವೃಥಾ ಕಾಣಿರೊ ॥ ೨ ॥

(ಚನ್ನಬಸವಣ್ಣ)

೪

ರಾಗ– ಪಟದೀಪ) (ತಾಲ– ತ್ರಿತಾಲ

[ಕುಸುಮಾಂಜಲಿ ವಾಹಿಲೀ.. ಎಂಬಂತೆ]

ದಯವಿಲ್ಲದ ಧರ್ಮವು । ಆವುದಯ್ಯ ।
ದಯವೇ ಬೇಕು ಸಕಲ । ಪ್ರಾಣಿಗಳೆಲ್ಲರಲ್ಲಿ ॥ಪ॥



ದಯವೇ ಧರ್ಮದ । ಮೂಲವಯ್ಯ ।
ಕೂಡಲಸಂಗಯ್ಯ । ನಂತಲ್ಲದೊಲ್ಲನಯ್ಯ ॥ ೧ ॥

(ಬಸವಣ್ಣ)

೫

ರಾಗ– ತಿಲಕ ಕಾಮೋದ) (ತಾಲ– ಝಪತಾಲ

[ಶ್ರೀರಘುಕೋ ಸಟಕರಿ... ಎಂಬಂತೆ]

ಹಗೆಯಲ್ಲಿ ಬಿದ್ದವರ । ಮೇಲೆ ಒರಳ ನೂಂಕುವರೆ ।
ಕೊಳದ ಮೇಲೆ ಸಂಕೋಲೆಯ । ನಿಕ್ಕುವರೆ ಚೆಂದ ಹುಣ್ಣ ॥ಪ॥

ಕಂಬಿಯಲ್ಲಿ ಕೀಸುವರೆ । ಕೂಡಲಸಂಗಯ್ಯ ಕಾಡುವ ।
ಕಾಟ ಸಿರಿಯಾಳಂಗಲ್ಲದೆ । ಸೈರಿಸಬಹುದೆ ॥೧॥

(ಬಸವಣ್ಣ)

೬

ರಾಗ– ಬಿಹಾಗ) (ತಾಲ– ತ್ರಿತಾಲ

[ಸತ್ಯ ಸತ್ಯ ನಚ... ಎಂಬಂತೆ]

ಕಾಯಕದಲ್ಲಿ ನಿರುತ । ನಾದರೆ ।
ಗುರುದರ್ಶನವಾ । ದರೂ ಮರೆಯಬೇಕು ॥ಪ॥

ಲಿಂಗಪೂಜೆಯಾದರೂ । ಮರೆಯಬೇಕು ।
ಜಂಗಮ ಮುಂದಿದ್ದರೂ । ಹಂಗು ಹರಿಯಬೇಕು ॥೧॥

ಕಾಯಕವೇ ಕೈಲಾ । ಸವಾದ ಕಾರಣ ।
ಅಮರೇಶ್ವರ ಲಿಂಗ । ವಾಯ್ತಾದರು ಕಾಯಕದೊಳಗು ॥೨॥

(ಆಯ್ದಕ್ಕಿ ಮಾರಯ್ಯ)

## ೧೦

ರಾಗ- ಬಾಗೇಶ್ರೀ)    (ತಾಲ- ಝಪತಾಲ

[ಅತಾ ರಾಗದೇ...ಎಂಬಂತೆ]

ಆತ್ಮಸ್ತುತಿ ಪರನಿಂದೆಯು । ಕೇಳಿಸದಿರಯ್ಯಾ
ನಿಮ್ಮ ಧರ್ಮಾನು ಭಕ್ತನೆನ್ನಲ್ಲಿ । ಲೇಸುಂಟೆಂದು ಪರಿಣ
ಮಿಸಿದರೆ ॥ಪ॥

ನಿಮಗಾನು ದ್ರೋಹಿಯಯ್ಯಾ । ಕೂಡಲಸಂಗಮದೇವಾ ।
ನಿಮ್ಮ ಶರಣರ ಲೇಸೇ । ಎನ್ನಯ ಲೇಸಯ್ಯಾ ॥೧॥

(ಬಸವಣ್ಣ)

## ೧೧

ರಾಗ— ಕಾಫಿ)    (ತಾಲ— ತ್ರಿತಾಲ

[ಅಸಿ ಘಾಲಗಳಾ..ಎಂಬಂತ್ರ]

ಆಡಿ ಅಳುಪದಿರಾ ಲೇಸ ಮಾಡಿ ।
ಮರುಗದಿರಾ । ಕಂಡ್ಯಾ । ಎಲೆ ಮನವೇ ಕೂಡಿ ತಪ್ಪದಿರಾ ॥ಪ॥

ಬೇಡಿದವರಿಗೆ । ಇಲ್ಲೆನ್ನದಿರಾ ।
ನಾಡ ಮಾತು । ಬೇಡ । ಸೆರಗೊಡ್ಡಿ ಬೇಡು । ಕೂಡಲಸಂಗನ
ಶರಣರ ॥೧॥

(ಬಸವಣ್ಣ)



## ೧೨

ರಾಗ— ಭೈರವಿ)    (ತಾಲ— ದಾದರಾ

[ವೀರಶೈವಾಚಾರಪರಾ...ಎಂಬಂತೆ]

ಎನಗಿಂದ । ಕಿರಿಯರಿಲ್ಲ ।
ಶಿವಭಕ್ತರಿಗಿಂದ । ಹಿರಿಯರಿಲ್ಲ ॥ಪ॥

ನಿಮ್ಮ ಪಾದವೇ ಸಾಕ್ಷಿ । ಎನ್ನ ಮನವೇ ಸಾಕ್ಷಿ ।
ಕೂಡಲಸಂಗಮದೇವ । ಎನಗಿದೇ ದಿಬ್ಯ ॥೧॥

(ಬಸವಣ್ಣ)

## ೧೩

ರಾಗ- ಪಹಾಡಿ)    (ತಾಲ- ಕವಾಲಿ

[ಧಾವತಯೋಯಿ ಸಖ್ಯಾ....ಎಂಬಂತೆ]

ಆಶೆಯಿಂದ ಬಿಟ್ಟು । ಕಿರಿಯರಿಲ್ಲ ।
ನಿರಾಶೆಯಿಂದ ಬಿಟ್ಟು । ಹಿರಿಯರಿಲ್ಲ ॥ಪ॥

ದಯದಿಂದ ಬಿಟ್ಟು । ಧರ್ಮವಿಲ್ಲ ।
ವಿಚಾರದಿಂದ ಬಿಟ್ಟು । ಸಹಾಯಗಳಿಲ್ಲ ॥೧॥

ಸಭ್ಯರಾಚಾರಕ್ಕೆ । ಸಕಳೇಶ್ವರ ।
ದೇವರಿಂದ ಬಿಟ್ಟು । ದೈವವಿಲ್ಲ ॥೨॥

(ಸಕಳೇಶಮಾದರಸ)

೧೪

ರಾಗ- ಆನಂದಭೈರವಿ) [ಕರ್ನಾಟಕಿ] (ತಾಲ- ಆದಿತಾಲ

[ನಯನೀತಿ ಹೀ. .ಎಂಬಂತೆ]

ಸಾವು ತಡವಿಲ್ಲ। ನರಕ ದೂರವಿಲ್ಲ।
ದೇಹದಿಚ್ಛೆಗೆ ಹರಿದು। ಕೆಮ್ಮನೆ ಕೆಡಬೇಡ ॥ಪ॥
ದುರ್ವಿಷಯವ ಬಿಡು ಬೇಗ। ಗುರುಪದವ ನಂಬು।
ನಿಮ್ಮಲಿಗೆಯ ಚನ್ನರಾಮ। ನಲ್ಲಿ ಸುಖಿಯಪ್ಪೆ ॥೧॥

(ಚಂದಿಮರಸು)

೧೫

ರಾಗ- ಅಡಾಣಾ) (ತಾಲ- ತ್ರಿತಾಲ

[ಮುಂದರಿ ಮೋರಿಕಾ...ಎಂಬಂತೆ]

ನಾಳೆ ಬಪ್ಪುದೆಮಗೆ। ಇಂದೇ ಬರಲಿ।
ಇದಕಾರಂಜುವರು। ಇದಕಾರಳುಕುವರು।
ಜಾತಸ್ಯ ಮರಣಂ ಧೃವಂ। ಎಂದುದಾಗಿ ॥ಪ॥
ನಮ್ಮ ಕೂಡಲ। ಸಂಗಮದೇವ। ಬರೆದ ಬರಹವ।
ತಪ್ಪಿಸುವರೆ ಹರಿ। ಬ್ರಹ್ಮಾದಿಗಳವಲ್ಲ ॥೧॥

(ಬಸವಣ್ಣ)

೧೬

ರಾಗ- ಜೀವನಪುರಿ) (ತಾಲ- ತ್ರಿತಾಲ

[ಕೋನ ಖಬರಿಯಾ....ಎಂಬಂತೆ]

ಕತ್ತೆ ಬಲ್ಲುದೆ ಕಸ್ತುರಿಯ ವಾಸನೆ।
ತೊತ್ತು ಬಲ್ಲಳೆ ಗುರುಹಿರಿಯರುತ್ತಮರೆಂಬುದ ॥ಪ॥



ಭಕ್ತಿಯನರಿಯದ ವ್ಯರ್ಥ ಜೀವಿಗಳು।
ನಿಮ್ಮನೆತ್ತ ಬಲ್ಲರೈ ರಾಮನಾಥಾ ॥೧॥

(ದೇವರದಾಸಿಮಯ್ಯ)

೧೭

ರಾಗ:—ಯಮನ) (ತಾಲ---ಏಕತಾಲ

[ಜನ ಮಾನಸ...ಎಂಬಂತೆ]

ಎಡದ ಪಾದದಲೊದ್ದರೆ। ಬಲದ ಪಾದವ ಹಿಡಿವೆ।
ಬಲದ ಪಾದದಲೊದ್ದರೆ। ಎಡದ ಪಾದವ ಹಿಡಿವೆ ॥ಪಲ್ಲ॥

ತ್ರಾಹಿ ತ್ರಾಹಿ ತಪ್ಪೆನ್ನದು। ಕ್ಷಮೆ ನಿಮ್ಮದು ಕೂಡಲ।
ಸಂಗಮದೇವ ನಿಮ್ಮ। ಕರುಣದ ಕಂದ ನಾನು ॥೧॥

(ಬಸವಣ್ಣ)

೧೮

ರಾಗ:—ಭೀಮಪಲಾಸ) (ತಾಲ:—ತ್ರಿತಾಲ

[ಭೂಷಣಸಂಸಾರಾ...ಎಂಬಂತೆ)

ಒಲೆ ಹತ್ತಿ ಉರಿದರೆ ನಿಲಬಹುದಲ್ಲದೆ।
ಧರೆ ಹತ್ತಿ ಉರಿದರೆ ನಿಲಬಾರದು ॥ಪ॥

ಏರಿ ನೀರುಂಬರೆ। ಬೇಲಿ ಕೆಯ್ಯ ಮೇವರೆ।
ನಾರಿ ತನ್ನಯ। ಮನೆಯಲ್ಲಿ ಕಳವರೆ ॥೧॥

ತಾಯಿ ಮೊಲೆವಾಲು। ನಂಜಾಗಿ ಕೊಲುವರೆ।
ಇನ್ನಾರಿಗೆ ದೂರುವೆನಯ್ಯ। ಕೂಡಲಸಂಗಮದೇವ ॥೨॥

(ಬಸವಣ್ಣ)

## ೧೯

ರಾಗ:— ಕೇದಾರ)     (ತಾಲ:— ತ್ರಿತಾಲ

[ಮಾರಹರಾ . ಎಂಬಂತೆ]

ತನಗೆ ಮುನಿವರಗೆ । ತಾ ಮುನಿಯಲೇಕಯ್ಯ ।
ಅವರಿಗಾದಡೇನು । ತನಗಾದಡೇನು ॥ಪಲ್ಲ॥

ತನುವಿನ ಕೋಪ । ತನ್ನ ಹಿರಿಯತನದ ಕೇಡು ।
ಮನದ ಕೋಪ । ತನ್ನ ಅರುವಿನ ಕೇಡು ॥೧॥

ಮನೆಯೊಳಗಣ ಕಿಚ್ಚು । ಮನೆಯ ಸುಟ್ಟಲ್ಲದೆ ।
ನೆರೆಮನೆ ಬೇವುದೆ । ಕೂಡಲಸಂಗಮದೇವ ॥೨॥

(ಬಸವಣ್ಣ)

## ೨೦

ರಾಗ:— ಕೇದಾರ)     (ತಾಲ:- ಝಪತಾಲ

[ಸ್ಮರಹರನು ಶಂಕರನು...ಎಂಬಂತೆ]

ಕಳ್ಳಗಂಜಿ ಕಾಡ ಹೊಕ್ಕರೆ । ಹುಲಿ ತಿಂಬುದ ಮಾಬುದೆ ।
ಹುಲಿಗಂಜಿ ಹುತ್ತವ ಹೊಕ್ಕರೆ । ಸರ್ಪ ತಿಂಬುದ ಮಾಬುದೆ ॥ಪಲ್ಲ॥

ಕಾಲಗಂಜಿ ಭಕ್ತನಾದರೆ । ಕರ್ಮ ತಿಂಬುದ ಮಾಬುದೆ ।
ಮೃತ್ಯುವಿನ ಬಾಯ ತುತ್ತಾದ । ವೇಷಡಂಭಕರನೇನೆಂಬೆ
ಗುಹೇಶ್ವರಾ ॥೧॥

(ಅಲ್ಲಮಪ್ರಭು)



## ೨೧

ರಾಗ:— ಸೋಹನಿ)     (ತಾಲ:- ತ್ರಿತಾಲ

[ಸಾವರೋಚರಾವತ...ಎಂಬಂತೆ]

ಮಡಿಕೆಯ ಮಾಡುವರೆ । ಮಣ್ಣೇ ಮೊದಲು ।
ತೊಡಿಗೆಯ ಮಾಡುವರೆ । ಹೊನ್ನೇ ಮೊದಲು
ಶಿವಪಥವನರಿವಡೆ । ಗುರುಪಥವೆ ಮೊದಲು ॥ಪಲ್ಲ॥

ಕೂಡಲಸಂಗಮ । ದೇವರನರಿವಡೆ
ಶರಣರ ಸಂಗವೇ ಮೊದಲು ॥೧॥

(ಬಸವಣ್ಣ)

## ೨೨

ರಾಗ:— ಖಂಬಾವತಿ)     (ತಾಲ:- ತ್ರಿತಾಲ

[ಸುಖಸ್ವಾಮಿನೀ...ಎಂಬಂತೆ]

ಆರು ಮುನಿದು ನಮ್ಮ । ನೇನ ಮಾಡುವರು ।
ಊರು ಮುನಿದು ನಮ್ಮ । ನೆಂತ ಮಾಡುವರು ॥ಪಲ್ಲ॥

ನಮ್ಮ ಕುನ್ನಿಗೆ । ಕೂಸ ಕೊಡಬೇಡ ।
ನಮ್ಮ ಸೊಣಗಂಗೆ । ತಳಿಗೆಯಲಿಕ್ಕಬೇಡ ॥೧॥

ಆನೆಯ ಮೇಲೆ ಹೋಹವನ । ಶ್ವಾನ ಕಚ್ಚಬಲ್ಲುದೆ ।
ಕೂಡಲಸಂಗಮದೇವರುಳ್ಳ । ನ್ನಕ್ಕರ ನಮಗೇನಯ್ಯ ॥೨॥

(ಬಸವಣ್ಣ)

### ೨೩

ರಾಗಃ-ಕಾಲಂಗಡ (ಕರ್ನಾಟಕಿ)    ತಾಳಃ-ದೀಪಚಂದಿ

ಅಮೃತಕ್ಕೆ ಹಸಿವುಂಟೆ । ಜಲಕೆ ತೃಷೆಯುಂಟೆ ।
ಘನಪುರುಷಂಗೆ । ವಿಷಯವುಂಟೆ ॥ಪಲ್ಲ॥

ಸದ್ಗುರು ಕಾರುಣ್ಯ । ಪಿಡಿದು ಲಿಂಗಾರ್ಚನೆಯ ।
ಮಾಡುವ ಮಹಾಶರಣಂಗೆ । ಮುಕ್ತಿಯ ಬಯಕೆಯುಂಟೆ ॥೧॥

ಆವರುಗಳಿಗೆ ಅದು ಸ್ವಯಂಭು । ಸಹಜಸ್ವಭಾವ ಇನ್ನು ತೃಪ್ತಿ ।
ಅಪ್ಪಾಯನ ಅರಸಲುಂಟೆ ಉರಿಲಿಂಗ । ಪೆದ್ದಿಪ್ರಿಯ ವಿಶ್ವೇಶ್ವರಾ ॥೨॥

(ಉರಿಲಿಂಗಪೆದ್ದಿ)

### ೨೪

ರಾಗಃ-ಜೀವನಪುರಿ)    (ತಾಳಃ-ತ್ರಿತಾಲ

[ಅಜಿಪುರವಾಹೀ... ಎಂಬಂತೆ]

ಮನವೆಂಬ ಮರ್ಕಟನು । ತನುವೆಂಬ ವೃಕ್ಷವನೇರಿ ।
ಇಂದ್ರಿಯಂಗಳೆಂಬ ಶಾಖೆ । ಶಾಖೆಗೆ ಹಾರಿ ॥ಪಲ್ಲ॥

ವಿಷಯಂಗಳೆಂಬ ಹಣ್ಣು । ಫಲಂಗಳ ಗ್ರಹಿಸಿ ।
ಭವದತ್ತ ಮುಖವಾಗಿ ಹೋಗುತ್ತಿದೆ ನೋಡಾ ॥೧॥

ಮನವೆಂಬ ಮರ್ಕಟ ನಿಮ್ಮ । ನೆನವೆಂಬ ಪಾಶದಿ ಕಟ್ಟಿ ।
ಎನ್ನನುಳಹಿಸಿ ಕೊಳ್ಳಯ್ಯಾ । ಅಖಂಡೇಶ್ವರಾ ॥೨॥

(ಷಣ್ಮುಖಸ್ವಾಮಿ)



### ೨೫

ರಾಗಃ-ಭೈರವಿ)    (ತಾಳಃ-ತ್ರಿತಾಲ

[ನಿಸಿದಿನಿಮನಿ .. ಎಂಬಂತೆ]

ಭಕ್ತಿರೂಪನು ಬಸವ । ನಿತ್ಯರೂಪನು ಬಸವ ।
ಮತ್ತಾನಂದ ಸ್ವರೂಪನು ಬಸವಣ್ಣನು ।
ಸದ್ರೂಪನು ಬಸವ । ಚಿದ್ರೂಪನು ಬಸವ ॥ಪಲ್ಲ॥

ಎತ್ತ ನೋಡಿದರತ್ತ ಪರಿಪೂರ್ಣನಾಗಿಪ್ಪನು ।
ಬಸವಣ್ಣನಿಂದ ನಿತ್ಯ । ಸುಖಿಯಾದೆನಯ್ಯಾ ।
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ ॥೧॥

(ಸಿದ್ಧರಾಮ)

### ೨೬

ರಾಗಃ-ಶಂಕರಾ)    ತಾಲಃ-ಝಪತಾಲ

[ಸೀತಾಪತೆ ರಾಮರಾಧಾಪತೇ ಕೃಷ್ಣ...ಎಂಬಂತೆ]

ಆಶೆಯುಳ್ಳನ್ನಕ್ಕ । ಒಬ್ಬರ ಆಶ್ರಯಿಸುವದು ।
ಆಶ್ರಯದಾಸೆ । ಕಷ್ಟ ಕಾಣಿರಯ್ಯಾ ॥ಪಲ್ಲ॥

ಆಶೆಯೇ ದಾಸತ್ವ । ನಿರಾಶೆಯೇ ಈಶತ್ವ ।
ದಾಸತ್ವ ಈಶತ್ವ । ಈ ಅನುವ ವಿಚಾರಿಸಿ ॥೧॥

ನಿರಾಶೆಯಾಗಿಪ್ಪುದೇ । ಈಶಪದವಯ್ಯಾ ।
ಉರಿಲಿಂಗಪೆದ್ದಿಪ್ರಿಯ । ವಿಶ್ವೇಶ್ವರಾ ॥೨॥

(ಉರಿಲಿಂಗಪೆದ್ದಿ)

೨೭

ರಾಗ:-ನಂದ)        (ತಾಲ:—ತ್ರಿತಾಲ

[ಹಾಸೋನಿ ನಾಜೋನಿ...ಎಂಬತೆ]

ಶಿವನೇ ದೈವ । ಕೊಲ್ಲದಿಪ್ಪುದೇ ಧರ್ಮ ।
ಅಧರ್ಮದಿಂದ ಬಂದುದ । ನೊಲ್ಲದಿಪ್ಪುದೆ ನೇಮ ॥ಪಲ್ಲ॥

ಆಶೆಯಿಲ್ಲದೆ ಇಪ್ಪುದೆ ತಪ । ರೋಷವಿಲ್ಲದೆ ಇಪ್ಪುದೆ ಜಪ ।
ವಂಚನೆಯಿಲ್ಲದೆ । ಇಪ್ಪುದೆ ಭಕ್ತಿ ॥೧॥

ಹೆಚ್ಚು ಕುಂದಿಲ್ಲದೆ ಇಪ್ಪುದೆ ಸಮಯಾಚಾರ । ಇದುವೆ ಸತ್ಯ ಶಿವ
ಬಲ್ಲ ಶಿವನಾಣೆ ।
ಉರಿಲಿಂಗಪೆದ್ದಿ । ಪ್ರಿಯವಿಶ್ವೇಶ್ವರಾ ॥೨॥

(ಉರಿಲಿಂಗಪೆದ್ದಿ)

೨೮

ರಾಗ:- ಜಾಗೇಶ್ರೀ (ಕರ್ನಾಟಕೀ)        ತಾಲ:- ಝುಪತಾಲ

ಕಾಗೆ ಒಂದಗಳು ಕಂಡರೆ । ಕರೆಯದೆ ತನ್ನ ಬಳಗವನೆಲ್ಲವನು ।
ಕೋಳಿ ಒಂದು ಗುಟುಕ ಕಂಡರೆ । ಕರೆಯದೆ ತನ್ನ ಕುಲವನ್ನೆಲ್ಲ
ವನು ॥ಪಲ್ಲ॥
ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದಡೆ । ಕಾಗೆ ಕೋಳಿಗಿಂತ ಕರಕಷ್ಟ
ಕೂಡಲಸಂಗಮದೇವಾ ॥೧॥

(ಬಸವಣ್ಣ)

೨೯

ರಾಗ— ದೇಸಕರ)        (ತಾಲ- ತ್ರಿತಾಲ

[ಪುರುಷಾಸ ಸ್ತ್ರೀ...ಎಂಬಂತೆ]

ಸೆಟ್ಟಿಯೆಂಬೆನೆ ಸಿರಿಯಾಳನ । ಮಡಿವಳನೆಂಬೆನೆ ಮಾಚಯ್ಯನ ।
ಡೋಹರನೆಂಬೆನೆ ಕಕ್ಕಯ್ಯನ ॥ಪಲ್ಲ॥

(ಬಸವಣ್ಣ)



ಮಾದರನೆಂಬೆನೆ ಚನ್ನಯ್ಯನ ।
ಆನು ಹಾರುವನೆಂದಡೆ ಕೂಡಲ । ಸಂಗಯ್ಯ ನಗುವನಯ್ಯ ॥೧॥

(ಬಸವಣ್ಣ)

೩೦

ರಾಗ— ತಿಲಕ ಕಾಮೋದ)        (ತಾಲ— ಏಕತಾಲ

[ನುರಲೇ ಮಾನಸ...ಎಂಬಂತೆ]

ನುಡಿಯಲ್ಲಿ । ಕರ್ಕಶವಿಲ್ಲದೆ ॥
ನಡೆಯಲ್ಲಿ ಬೇಸರವೋಗದೆ । ಹಿಡಿದ ಭಕ್ತಿಯ ಕಡೆತನಕ
ಬಿಡದೆ ॥ಪಲ್ಲ॥

ಬಡತನ ಎಡರು ಕಂಟಕಗಳು ಬಂದಲ್ಲಿ । ಚಿಂತೆಯಿಂದ
ಕಾಂತಿಗುಂದದೆ ।

ಅಡಿಗಡಿಗೆ ಶಿವಶಿವಾ ॥೧॥

ಎಂಬ ನುಡಿಯ ಮರೆಯದಿಪ್ಪ । ಸದ್ಭಕ್ತರಿಂಗೆ ಬೇಡಿದ ಪದವಿಯ
ನೀವ ।

ನಮ್ಮ ಅಖಂಡೇಶ್ವರಾ ॥೨॥

(ಷಣ್ಮುಖಸ್ವಾಮಿ)

೩೦

ರಾಗ— ಕಾಫಿ)        (ತಾಲ— ತ್ರಿತಾಲ

[ಬಾಳಾಕಾ ಝೋಪ ಯೇಯಿನಾ...ಎಂಬಂತೆ]

ಎಲ್ಲಿ ನೋಡಿದಡಲ್ಲಿ ನೀನೆ ದೇವಾ ॥ ಎಲ್ಲಿ ಮುಟ್ಟಿದಲ್ಲಿ ನೀನೆ
ದೇವಾ ॥ಪಲ್ಲ॥

ಎಲ್ಲಿ ಭಾವಿಸಿದಲ್ಲಿ ನೀನೆ ದೇವಾ ; ಎಲ್ಲೆಡೆಯಲ್ಲಿ ನಿಮ್ಮ ।
ಮಹಾಪ್ರಥೆಯೆ ಮುಸುಕಿತಾಗಿ । ಅಖಂಡೇಶ ನಾ ನೀನೆಂಬುದಕ್ಕೆ
ತೆರಹಿಲ್ಲ ॥೧॥

(ಷಣ್ಮುಖಸ್ವಾಮಿ)

೩೨

ರಾಗ– ಮಿಶ್ರಪಹಾಡಿ) (ತಾಲ–ಕವಾಲಿ

[ವಂದಿತ ರಾಧಾಬಾಲಾ... ಎಂಬಂತೆ]

ಎನ್ನ ಕಾಯದ ಕಠಿಣವ ಕಳೆಯಯ್ಯ । ಎನ್ನ ಜೀವದುಪಾಧಿಯ
ಕಳೆಯಯ್ಯ ।

ಎನ್ನ ಪ್ರಾಣದ ಪ್ರಪಂಚವ ತೊಲಗಿಸಯ್ಯ ।
ಎನ್ನ ಭಾವದ ಭ್ರಮೆಯ ಕೆಡಿಸಯ್ಯ ।

ಎನ್ನ ಮನದ ವ್ಯಾಕುಳವ ಮಾಣಿಸಯ್ಯ ।
ಎನ್ನ ಕರಣೇಂದ್ರಿಯಗಳ । ಕಷ್ಟ ಗುಣವ ನಷ್ಟ ಮಾಡಯ್ಯ॥
ಎನ್ನ ಜೀವದುಪಾಧಿಯ ಕಳೆಯಯ್ಯ॥

ಎನ್ನೊಳಕೆ ನಿಮ್ಮ ಕರುಣಾ । ಅಮೃತವ ತುಂಬಯ್ಯಾ ।
ಗುರುವೆ ಅಖಂಡೇಶ್ವರಾ ॥೧॥

(ಷಣ್ಮುಖಸ್ವಾಮಿ)



೩೩

ರಾಗ— ಖಂಬಾವತಿ) (ತಾಲ— ತ್ರಿತಾಲ

[ಸಖಿ ಮೋಹನ ಮುರಲಿ ಸುನಾವೆ... ಎಂಬಂತೆ]

ಬೇವಿನ ಬೀಜವ ಬಿತ್ತಿ । ಬೆಲ್ಲದ ಕಟ್ಟೆಯ ಕಟ್ಟಿ ॥ಪಲ್ಲ॥

ಆಕಳ ಹಾಲನೆರೆದು । ಜೇನತುಪ್ಪ ಹೊಯ್ದರೆ ।
ಸಿಹಿಯಾಗ ಬಲ್ಲುದೆ । ಕಹಿಯಹುದಲ್ಲದೆ ॥೧॥

ಶಿವಭಕ್ತರಲ್ಲದವರ । ಕೂಡೆ ನುಡಿಯಲಾಗದು ।
ಕೂಡಲಸಂಗಮ । ದೇವಾ ॥ ೨ ॥

(ಬಸವಣ್ಣ)

೩೪

ರಾಗಃ—ಭೈರವ (ಕರ್ನಾಟಕಿ) (ತಾಲ:— ದೀಪಚಂದ

ಅಕಟಕಟಾ ಶಿವ । ನಿನಗಿನಿತು ಕರುಣವಿಲ್ಲ ।
ಅಕಟಕಟಾ ಶಿವ । ನಿನಗಿನಿತು ಕೃಪೆಯಿಲ್ಲ ॥ಪಲ್ಲ॥

ಯಾಕೆ ಹುಟ್ಟಿಸಿದೆ । ಇಹಲೋಕ ದುಃಖಿಯ ।
ಯಾಕೆ ಹುಟ್ಟಿಸಿದೆ ಪರಲೋಕ ದೂರನ ॥೧॥

ಯಾಕೆ ಹುಟ್ಟಿಸಿದೆ ಕೂಡಲ । ಸಂಗಮದೇವ ಕೇಳಯ್ಯಾ ।
ಎನಗೆ ಮತ್ತೊಂದು । ತರುಮರಾದಿಗಳದ್ದಿಲ್ಲವೇ ॥೨॥

(ಬಸವಣ್ಣ)

೩೫

ರಾಗ— ದುರ್ಗಾ) (ತಾಲ ತ್ರಿತಾಲ

[ಮನಮನೋಹನ ಮುರಲೀವಾಲಾ... ಎಂಬಂತೆ]

ಬೇಕೆನಲಾಗದು ಶರಣಂಗೆ ।
ಬೇಡೆನಲಾಗದು ಶರಣಂಗೆ ॥ಪಲ್ಲ॥

ಜಂದ ಸುಖವನತಿಗಳೆಯ । ಲಾಗದು ಶರಣಂಗೆ
ಇದು ಕಾರಣ ಕೂಡಲ ಚನ್ನಸಂಗಯ್ಯ ।
ನಿಮ್ಮ ಶರಣರು ಉಂಡು । ಉಪವಾಸಿಗಳು ।
ಬಳಸಿ ಬ್ರಹ್ಮಚಾರಿಗಳು॥ ೧ ॥

(ಚೆನ್ನಬಸವಣ್ಣ)

೩೬

ರಾಗ— ಭೀಮಪಲಾಸ) (ತಾಲ— ತ್ರಿತಾಲ

[ಭೂಷಣ ಸಂಸಾರ...ಎಂಬಂತೆ]

ತುಂಬಿದುದು ತುಳುಕದು ನೋಡಾ ।
ನಂಬಿದುದು ಸಂದೇಹಿಸದು ನೋಡಾ ॥ ಪಲ್ಲ ॥

ಒಲಿದುದು ಓಸರಿಸದು ನೋಡಾ ।
ನೆರೆಯರಿದುದು ಮರೆಯದು ನೋಡಾ ॥ ೧ ॥

ಚನ್ನಮಲ್ಲಿಕಾರ್ಜುನಯ್ಯ । ನೀನೊಲಿದ ।
ಶರಣಂಗೆ । ನಿಸ್ಸೀಮ ಸುಖವಯ್ಯಾ ॥ ೨॥

(ಅಕ್ಕಮಹಾದೇವಿ)



೩೭

ರಾಗ— ಮಾಲಕಂಸ) (ತಾಲ— ತ್ರಿತಾಲ

[ಮುಖ ಮೋರ ಮೋರ ಮೋಸೆ... ಎಂಬಂತೆ]

ಮಾರಿ ಮಸಣಿ ಎಂಬವು ಬೇರಿಲ್ಲ ಕಾಣಿರೊ ।
ಮಾರಿಯೆಂಬುದೇನು । ಕಂಗಳು ತಪ್ಪಿ ನೋಡಿದರೆ ಮಾರಿ ॥ಪ॥

ನಾಲಿಗೆ ತಪ್ಪಿ ನುಡಿದರೆ ಮಾರಿ ।
ನಮ್ಮ ಕೂಡಲಸಂಗಯ್ಯನ ।
ನೆನಹ ಮರೆದರೆ ಮಾರಿ ॥ ೨ ॥

(ಬಸವಣ್ಣ)

೩೮

ರಾಗ— ಯಮನ) (ತಾಲ— ಝಪತಾಲ

[ನಯನೇ ಲಾಜವಿತ... ಎಂಬಂತೆ]

ಹುತ್ತವ ಬಡಿದರೆ । ಹಾವು ಸಾಯಬಲ್ಲುದೇನಯ್ಯ ।
ಅಘೋರ ತಪವ । ಮಾಡಿದಡೇನು ॥ ಪಲ್ಲ ॥

ಅಂತರಂಗ ಆತ್ಮಶುದ್ಧ । ವಿಲ್ಲದವರನೆಂತು ।
ನಂಬುವೆನಯ್ಯ । ಕೂಡಲಸಂಗಮದೇವಾ ॥ ೧ ॥

(ಬಸವಣ್ಣ)

೩೯

ರಾಗ- ಮಾಂಡ) (ತಾಲ- ದಾದರಾ

[ಭಾನ ಹರಿಹಾ ಮೋಹಿ ನಯನಾ... ಎಂಬಂತೆ]

ಘಟವನೊಡೆದು । ಬಯಲ ನೋಡಲದೇಕೆ ॥ ಪ ॥

ಘಟದೊಳಗಿಪ್ಪುದೇ । ಬಯಲೆಂದರಿದಡೆ ಸಾಲದೇ ।
ಪಟವ ಹರಿದು । ತಂತುವ ನೋಡಲದೇಕೆ ॥೧॥
ಬಯಲ ನೋಡಲದೇಕೆ ॥
ಆ ಪಟವ ತಂತು । ವೆಂದರಿದಡೆ ಸಾಲದೇ ।
ಕಟಕವ ಮುರಿದು । ಕಾಂಚನವ ನೋಡಲದೇಕೆ ॥ ೨ ॥
ಬಯಲ ನೋಡಲದೇಕೆ ।
ಆ ಕಟಕವೇ ಕಾಂಚನ । ವೆಂದರಿದಡೆ ಸಾಲದೇ ।
ತನ್ನನಳಿದು ಘನವ । ನೋಡಲದೇಕೆ । ॥ ೩ ॥
ಬಯಲ ನೋಡಲದೇಕೆ ।
ತಾನೆ ಘನವೆಂ । ದರಿದಡೆ ಸಾಲದೇ ।
ಹೇಳಾ ರಾಮನಾಥಾ । ॥ ೪ ॥
ಬಯಲ ನೋಡಲದೇಕೆ ।

(ದೇವರ ದಾಸಿಮಯ್ಯ)

೪೦

ರಾಗ— ಸೋಹನಿ)        (ತಾಲ- ತ್ರಿತಾಲ

[ಲೋಳತ ಕಚಮುಖ ಮಧುವರಿ . ಎಂಬಂತೆ]

ದೇವಲೋಕ ಮರ್ತ್ಯಲೋಕ । ವೆಂಬುವು ಬೇರಿಲ್ಲ ಕಾಣಿರೋ ।
ಸತ್ಯವ ನುಡಿವುದೇ ದೇವಲೋಕ । ಅಸತ್ಯವ ನುಡಿವುದೇ ಮರ್ತ್ಯಲೋಕ ॥ಪ॥
ಆಚಾರವೇ ಸ್ವರ್ಗ । ಅನಾಚಾರವೇ ನರಕ ।
ಇದಕ್ಕೆ ನೀವೇ ಪ್ರಮಾಣು । ಕೂಡಲಸಂಗಮದೇವಾ ॥ ೧ ॥

(ಬಸವಣ್ಣ)



೪೧

ರಾಗ- ಬಿಹಾಗ)        (ತಾಲ- ತ್ರಿತಾಲ

[ಬಾಲಮುರೇ.. ಎಂಬಂತೆ]

ಕಳಬೇಡ ಕೊಲಬೇಡ ।
ಹುಸಿಯ ನುಡಿಯಲು ಬೇಡ । ಮುನಿಯಬೇಡ ।
ಅನ್ಯರಿಗೆ ಅಸಹ್ಯಬಡಬೇಡ ॥ ಪ ॥
ತನ್ನ ಬಣ್ಣಿಸಬೇಡ । ಇದಿರ ಹಳಿಯಲು ಬೇಡ ।
ಇದೇ ಅಂತರಂಗ ಶುದ್ಧಿ ॥ ೧ ॥
ಇದೇ ಬಹಿರಂಗ ಶುದ್ಧಿ । ಇದೇ ನಮ್ಮ ।
ಕೂಡಲಸಂಗನನೊಲಿಸುವ ಪರಿ ॥ ೨ ॥

(ಬಸವಣ್ಣ)

೪೨

ರಾಗ— ಕಾಫಿ)        (ತಾಲ— ತ್ರಿತಾಲ

[ಭಕ್ತಿ ಭಾವ ಹಾ ಘ್ಯಾ . ಎಂಬಂತೆ]

ಪರಧನ ಒಲ್ಲದಿಪ್ಪುದೇ ವ್ರತ ।
ಪರಸ್ತ್ರೀಯರ ಕೂಡದಿಪ್ಪುದೇ ಶೀಲ ।
ಸರ್ವ ಜೀವವ ಕೊಲ್ಲದಿಪ್ಪುದೇ ನೇಮ ॥ ಪ ॥
ತಥ್ಯ ಮಿಥ್ಯವನಳಿದು ।
ಇಪ್ಪುದೇ ನಿತ್ಯನೇಮ ॥ ೧ ॥

ಇದು ಈಶಾನ್ಯಮೂರ್ತಿಮಲ್ಲಿಕಾರ್ಜುನ ।
ಲಿಂಗಕ್ಕೆ ಸಂದೇಹವಿಲ್ಲದ ವ್ರತ ॥ ೨ ॥

(ಶಿವಲೆಂಕಮಂಚಣ್ಣ)

೪೩.

ರಾಗ- ಭೈರವಿ) (ತಾಲ- ತ್ರಿತಾಲ

[ನ ಚ ಮಾನಸಾ...ಎಂಬಂತೆ]

ಕಾಯ ಕರ್ರನೆ । ಕಂದಿದರೇನಯ್ಯ ।
ಕಾಯ ಮಿರ್ರನೆ ಮಿಂಚಿದರೇನಯ್ಯ ॥ ಪ ॥

ಅಂತರಂಗ । ಶುದ್ಧವಾದ ಬಳಿಕ ।
ಚನ್ನಮಲ್ಲಿಕಾರ್ಜುನ ।
ಲಿಂಗವು ಒಲಿದ ಕಾಯವು । ಹೇಗಿದ್ದರೇನಯ್ಯ ॥೧॥

(ಅಕ್ಕಮಹಾದೇವಿ)

೪೪

ರಾಗ:– ಭೀಮಪಲಾಸ) (ತಾಲ:– ಏಕತಾಲ

[ಮೋಹನಶ್ಯಾಮ ಶೋಭನಾ...ಎಂಬಂತೆ]

ಆಡಿದರೇನು ಹಾಡಿದರೇನು ।
ಓದಿದರೇನು ತ್ರಿವಿಧ ದಾಸೋಹವಿಲ್ಲದನ್ನಕ್ಕ ॥ ಪಲ್ಲ ॥

ಆಡದೇ ನವಿಲು ಹಾಡದೇ ತಂತಿ ।
ಓದದೇ ಗಿಣಿ ।
ಭಕ್ತಿಯಿಲ್ಲದವರನೊಲ್ಲ ।
ಕೂಡಲಸಂಗಮದೇವ ॥ ೧ ॥

(ಬಸವಣ್ಣ)



೪೫

ರಾಗ:- ಮುಲ್ತಾನಿ) (ತಾಲ:—ತ್ರಿತಾಲ

[ಹಮಸೇ ಕುಮಾರಾರ ಕರೋಂಗಿರೆ...ಎಂಬಂತೆ]

ಎನ್ನ ಮಾಯದ ಮದವ ಮುರಿಯಯ್ಯ ।
ಎನ್ನ ಕಾಯದ ಕಳವಳವ ಕೆಡಿಸಯ್ಯ ।
ಎನ್ನ ಜೀವದ ಜಂಜಡವ ಬಿಡಿಸಯ್ಯ ॥ಪಲ್ಲ॥

ಎನ್ನ ದೇವ । ಚನ್ನಮಲ್ಲಿಕಾರ್ಜುನಯ್ಯ ।
ಎನ್ನ ಸುತ್ತಿದ ಮಾಯಾ ಪ್ರಪಂಚವ ।
ಬಿಡಿಸಾ ನಿಮ್ಮ ಧರ್ಮ ॥ ೧ ॥

(ಅಕ್ಕಮಹಾದೇವಿ)

೪೬

ರಾಗ- ಮಿಶ್ರಪಹಾಡಿ) (ತಾಲ- ಕವಾಲಿ

[ಹಾಸತ ನಾಚತ ಜಾವು...ಎಂಬಂತೆ]

ತನು ಬತ್ತಲೆ ಇದ್ದರೇನಯ್ಯ ।
ಮನ ಶುಚಿಯಾಗದನ್ನಕ್ಕರ ॥ ಪ ॥

ಮಂಡೆ ಬೋಳಾದಡೇನು ।
ಭಾವ ಬಯಲಾಗದನ್ನಕ್ಕರ ॥

ಭಸ್ಮವ ಹೂಸಿದಡೇನು । ಕರಣಾದಿ ।
ಗುಣಂಗಳನೊತ್ತಿ ।
ಗುಣಂಗಳನೊತ್ತಿ ಮೆಟ್ಟಿ ಸುಡದನ್ನಕ್ಕರ ॥

ಇಂತು ಅರಿಯ ವೇಷದ ಭಾಷೆಗೆ ।
ಗುಹೇಶ್ವರ ಸಾಕ್ಷಿಯಾಗಿ ಛೀ ಎಂಬೆನು ।
ಕಾಣಾ ಸಂಗನಬಸವಣ್ಣಾ ॥ ೧ ॥

(ಬಾಹೂರ ಬೊಮ್ಮಣ್ಣ)

೪೭

ರಾಗಃ- ಕೇದಾರ) (ತಾಲಃ- ತ್ರಿತಾಲ

[ಮಾರಹರಾತಾ...ಎಂಬಂತೆ]

ನಿಷ್ಠೆಯುಳ್ಳಾತಂಗೆ । ನಿತ್ಯನೇಮದ ಹಂಗೇಕೆ ।
ಸತ್ಯವುಳ್ಳಾತಂಗೆ । ತತ್ವ ವಿಚಾರದ ಹಂಗೇಕೆ ॥ ಪ ॥

ಮನಶುದ್ಧವುಳ್ಳಾತಂಗೆ । ಮಂತ್ರದ ಹಂಗೇಕೆ ।
ಅರಿವುಳ್ಳಾತಂಗೆ । ಅಗ್ಗವಣಿಯ ಹಂಗೇಕೆ ॥ ೧ ॥

ಭಾವಶುದ್ಧವುಳ್ಳಾತಂಗೆ । ಹೂವಿನ ಹಂಗೇಕೆ ।
ಕೂಡಲಚನ್ನಸಂಗಯ್ಯ ನಿಮ್ಮನರಿದಾತಂಗೆ ನಿಮ್ಮ ಹಂಗೇಕೆ ॥೨

(ಚನ್ನಬಸವಣ್ಣ)

೪೮

ರಾಗಃ—ಸೋಹನಿ) (ತಾಲಃ-ತ್ರಿತಾಲ

[ಸಾವರಿಯ ಚರಾವತ...ಎಂಬಂತೆ]

ಮುಗಿಲ ಮರೆಯ ಸೂರ್ಯನಂತೆ ।
ನೆಲದ ಮರೆಯ ನಿಧಾನದಂತೆ ।
ಒರೆಯ ಮರೆಯ ಅಲಗಿನಂತೆ ॥ ಪ ॥



ಹಣ್ಣಿನೊಳಗಣ ರಸದಂತೆ ।
ಶರಣ ಶರೀರವ ಮರೆಗೊಂಡು ॥ ೧ ॥

ಪರಮಪಾವನಮೂರ್ತಿ ಪರಾಪರ ತಾನು ।
ತಾನಾಗಿರ್ದುದನೇನೆಂಬೆನಯ್ಯ ॥ ೨ ॥

ಮಹಾಲಿಂಗ ಗುರುಶಿವ ।
ಸಿದ್ಧೇಶ್ವರ ಪ್ರಭುವೇ ॥ ೩ ॥

(ತೋಂಟದ ಸಿದ್ಧಲಿಂಗ)

೪೯

ರಾಗಃ--- ಬಿಹಾಗ) (ತಾಲ:- ತ್ರಿತಾಲ

ಹುತ್ತದ ಮೇಲಣ । ರಜ್ಜು ಮುಟ್ಟಿದರೆ
ಸಾವರು ಶಂಕಿತ । ರಾದವರು ॥ ಪ ॥

ಸರ್ಪದಷ್ಟವಾದರೆಯೂ ।
ಸಾಯರು ನಿಶ್ಶಂಕಿತರಾದವರು ॥ ೧ ॥

ಕೂಡಲಸಂಗಮದೇವ ಶಂಕಿತಂಗೆ ।
ಪ್ರಸಾದಸಿಂಗಿಕಾಳ ಕೂಟ ವಿಷವು ॥ ೨ ॥

(ಬಸವಣ್ಣ)

೫೦

ರಾಗ--- ಮಿಶ್ರಪಹಾಡಿ) (ತಾಲ— ಕವಾಲಿ

ಹರನೀವ । ಕಾಲಕ್ಕೆ ಸಿರಿಯು । ಬೆನ್ನಲಿ ಬಕ್ಕು ।
ಹರಿದು ಹೆದ್ದೊರೆಯು ಕೆರೆ ತುಂಬಿದಂತಯ್ಯಾ ।
ನೆರೆಯದ ವಸ್ತು ನೆರೆವುದು ನೋಡಯ್ಯ ॥ ಪ ॥

ಅರಸು ಪರಿವಾರ ಕೈವಾರ ನೋಡಯ್ಯ ।
ಪರಮ ನಿರಂಜನನು ಮರೆವ ಕಾಲಕ್ಕೆ ।
ತುಂಬಿದ ಹರವಿಯು । ಕಲ್ಲು ಕೊಂಡಂತೆ ;
ಕೂಡಲ । ಸಂಗಮದೇವಾ ॥ ೧ ॥

(ಬಸವಣ್ಣ)

೫೧

ರಾಗಃ – ಭೈರವಿ) (ತಾಲ:- ದಾದರಾ

[ರಜ್ಯಾ ಪ್ರಭು ತೂನೆ...ಎಂಬಂತೆ]

ಚಕೋರಂಗೆ ಚಂದ್ರಮನ ; ಬೆಳಗಿನ ಚಿಂತೆ ।
ಅಂಬುಜಕ್ಕೆ ಭಾನುವಿನ । ಉದಯದ ಚಿಂತೆ ॥ ಪಲ್ಲ ॥

ಭ್ರಮರಂಗೆ ಪರಿಮಳದ । ಬಂಡುಂಬ ಚಿಂತೆ ।
ಎನಗೆ ನಮ್ಮ ಕೂಡಲಸಂಗಮ । ದೇವರ ನೆನೆವ ಚಿಂತೆ ॥೧॥

(ಬಸವಣ್ಣ)

೫೨

ರಾಗ:- ಪಹಾಡಿ) (ತಾಲ:- ಕವಾಲಿ

[ಲೋಟುನಕೊ ಮಜದೂರಕನ್ಹಯ್ಯಾ...ಎಂಬಂತೆ]

ಎನ್ನೊಳಗೆ ನೋಡಿದರೆ । ಎಳ್ಳನಿತು ಹುರುಡಿಲ್ಲವಯ್ಯ ದೇವಾ ।
ಹೊನ್ನು ಹೆಣ್ಣು ಮಣ್ಣು ನನ್ನದು ॥ಪ॥



ಪುತ್ರ ಮಿತ್ರ ಕಳತ್ರಾದಿಗಳು ನನ್ನದು ।
ಧನ ಧಾನ್ಯ ಆನೆ ಕುದುರೆ ಎತ್ತು ತೊತ್ತು ।
ಮುಂದಿ ಮಕ್ಕಳು ಅಷ್ಟೈಶ್ವರ್ಯದಲ್ಲಿ ।
ನಾ ಬಲ್ಲಿದನೆಂದು ಬಲು ಹೆಮ್ಮಿನಿಂದ ॥೧॥

ಗುರುಹಿರಿಯರ ಕಂಡರೆ ತಲೆವಾಗದಯ್ಯ ಎನ್ನ ಚಿತ್ತವು ।
ಇಂಥ ಚಿತ್ತದಿಂದೆ ನುಗ್ಗು ನುರಿಯಾದೆನಯ್ಯ ।
ನಿಃಕಳಂಕಮೂರ್ತಿ ಸಚ್ಚಿದಾನಂದ ಎನ್ನಪರಾಧವ ।
ನೋಡದೆ ಕಾಯಯ್ಯ ಶ್ರೀಗುರು ಲಿಂಗ ಜಂಗಮವೇ ॥

( ?

೫೩

ರಾಗ:- ತಿಲಕ ಕಾಮೋದ) (ತಾಲ:- ಏಕತಾಲ

[ಸುರಲೇ ಮಾನಸ...ಎಂಬಂತೆ]

ಹಗಲು ಹಸಿವೆಗೆ ಕುದಿದು ।
ಇರುಳು ನಿದ್ರೆಗೆ ಕುದಿದು ।
ಉಳಿದಾದ ಹೊತ್ತೆಲ್ಲ ॥ ಪ ॥

ಅಶನ ವ್ಯಸನಕ್ಕೆ ಕುದಿದು ।
ಅಯ್ಯ ನಿಮ್ಮನರಿಯದ ಪಾಪಿ ನಾನಯ್ಯ ।
ಅಯ್ಯ ನಿಮ್ಮನರಿಯದ ಕರ್ಮಿ ನಾನಯ್ಯ ॥೧॥

ಮಹಾಲಿಂಗ ಕಲ್ಲೇಶ್ವರಾ ।
ಅಸಗ ನೀರಡಿಸಿ ಸತ್ತ ತೆರ ।
ನಂತಾಯಿತ್ತೆನ್ನ ಯುಕ್ತಿ ॥ ೨ ॥

(ಹಾವಿನಾಳ ಕಲ್ಲ

೫೪

ರಾಗ:—ಅಸಾವೇರಿ) (ತಾಲ—ಆದಿತಾಲ

(ಮನುಜ ಶರೀರವಿದೇನು ಸುಖ...)

ನೀರಕಂಡಲ್ಲಿ। ಮುಳುಗುವರಯ್ಯಾ ॥ಪ॥

ಮರನ ಕಂಡಲ್ಲಿ। ಸುತ್ತುವರಯ್ಯಾ।
ಬತ್ತುವ ಜಲವ। ಒಣಗುವ ಮರನ।
ನೆಚ್ಚಿದವರು। ನಿಮ್ಮನೆತ್ತಬಲ್ಲರು।
ಕೂಡಲಸಂಗಮ। ದೇವಾ ॥೧॥

(ಬಸವಣ್ಣ)

೫೫

ರಾಗ:—ಕಾಫಿ) (ತಾಲ:—ತ್ರಿತಾಲ

(ವಸಂತ ಆಲಾ—ಎಂಬಂತೆ)

ಉಟ್ಟುದ ತೊರೆದವಗೆ। ಊರೇನು ಕಾಡೇನು॥
ನಷ್ಟ ಸಂತಾನಕ್ಕೆ। ಕುಲವೇನು ಫಲವೇನು ॥ಪ

ಹುಟ್ಟುಗೆಟ್ಟಾತಂಗೆ। ಪುಣ್ಯವೇನು ಪಾಪವೇನು।
ಅದು ಕೆಟ್ಟುದು। ಕೆಟ್ಟುದು ॥೧॥

ತನ್ನ ತಾನರಿಯದೆ। ಬಟ್ಟೆ ಬಯಲಲ್ಲಿ।
ಬಿದ್ದ ನಮ್ಮ। ಅಜಗಣ್ಣ ತಂದೆ ॥೨॥

(ಮುಕ್ತಾಯಕ್ಕ)



೫೬

ರಾಗ— ಮಿಶ್ರಪಹಾಡಿ) (ತಾಲ—ಕವಾಲಿ

(ಯಮುನಾಜಳಿ ಖೇಳೂ ಖೇಳ...ಎಂಬಂತೆ)

ಅತ್ತಲಿತ್ತ ಸಾರದಂತೆ ಹೆಳವನ ಮಾಡಯ್ಯ ತಂದೆಯೇ।
ಸುತ್ತಿಸುಳಿದು ನೋಡದಂತೆ ಅಂಧಕನ ಮಾಡಯ್ಯ ತಂದೆ।
ಮತ್ತೊಂದ ಕೇಳದಂತೆ। ಕಿವುಡನ ಮಾಡಯ್ಯ ತಂದೆ।
ಅನ್ಯ। ವಿಷಯಕ್ಕೆಳಸದಂತೆ ಇರಿಸು ಕೂಡಲ। ಸಂಗಮದೇವಾ ॥೧॥

(ಬಸವಣ್ಣ)

೫೭

ರಾಗ— ಕಾಫಿ) (ತಾಲ— ಏಕತಾಲ

(ಬರಕತುವಾಪಿಯಾಸಾರಿ...ಎಂಬಂತೆ)

ಗಿಳಿಯೋದಿ ಫಲವೇನು।
ಬೆಕ್ಕು ಬಹುದ ಹೇಳಲರಿಯದು ॥ಪ॥

ಜಗವೆಲ್ಲ ಕಾಂಬ ಕಣ್ಣು ತನ್ನ।
ಕೊಂಬ ಕೊಯಿಲೆಯ ಕಾಣಲರಿಯದು।
ಇದಿರ ಗುಣವ ಬಲ್ಲೆನೆಂಬರು।
ತಮ್ಮ ಗುಣವರಿಯರು ಕೂಡಲಸಂಗಮದೇವಾ ॥೧॥

(ಬಸವಣ್ಣ)

೫೮

ರಾಗ:- ತಿಲಕಕಾಮೋದ) (ತಾಲಃ-ದಾದರಾ

(ಪ್ರಣತನಾಥ ಲಕ್ಷ್ಮಿಕಾಂತ... ಎಂಬಂತೆ)

ತವನಿಧಿ ಬೆಳೆದವಗೆ। ಕಣಜದ ಹಂಗುಂಟೆ।
ವಿರಕ್ತಂಗೆ ಅರ್ಥಕೆಗೊಂಬುವರುಂಟೆ ॥ಪಲ್ಲ॥

ಕಾಯಕವ ಮಾಡುವ ಭಕ್ತಂಗೆ।
ಇನ್ನಾರ ಕಾಡಲೇತಕೆಯ್ಯಾ।
ಆ ಗುಣ ಅಮರೇಶ್ವರಲಿಂಗಕ್ಕೆ ದೂರ ॥೧॥

(ಆಯದಕ್ಕಿಮಾರಯ್ಯ)

೫೯

ರಾಗ:— ಪಟದೀಪ) (ತಾಲಃ— ತ್ರಿಕಾಲ

(ಜರಿಲೇ ಸುಶೀಲ ಸಗುಣಾ.. ಎಂಬಂತೆ)

ಅಪ್ಪನು ನಮ್ಮ ಮಾದಾರ ಚನ್ನಯ್ಯ।
ಬೊಪ್ಪನು ನಮ್ಮ ಡೋಹರ ಕಕ್ಕಯ್ಯ।
ಚಿಕ್ಕಯ್ಯನೆಮ್ಮಯ್ಯ ಕಾಣಿರಯ್ಯ ॥ಪಲ್ಲ॥

ಅಣ್ಣನು ನಮ್ಮ ಕಿನ್ನರಿಬೊಮ್ಮಯ್ಯ।
ಎನ್ನನೇತಕ್ಕರಿಯಿರಿ। ಕೂಡಲಸಂಗಮದೇವಾ ॥೧॥

(ಬಸವಣ್ಣ)



೬೦

ರಾಗಃ— ಜಿಲ್ಲಾ ಖಮಾಜ) (ತಾಲ:— ಕವಾಲಿ

(ಸತ್ಯ ಆಹೆ ವಚನಾಲಾ... ಎಂಬಂತೆ)

ಮಣಿಯನೆಣಿಸಿ ದಿನವ ಕಳೆಯಲುಬೇಡ।
ಕಣಿಯ ಪೂಜಿಸಿ ದಿನವ ಕಳೆಯಲುಬೇಡ ॥ಪ॥

ಕ್ಷಣವಾದರು ನಿಜದ ನೆನಹೆ ಸಾಕು।
ಕ್ಷಣದೊಳಗಣ ಅರ್ಧವಾದರು ನಿಜದ ನೆನಹೆ ಸಾಕು।
ಬೆಂಕಿಯೊಳಗುಳ್ಳ ಬಿಸಿ ನೀರೊಳಗುಂಟೆ ಗುಹೇಶ್ವರಾ ॥೧॥

(ಪ್ರಭುದೇವ)

೬೧

ರಾಗಃ- ಮಿಶ್ರಪಹಾಡಿ) (ತಾಲಃ- ಕವಾಲಿ

(ಆದಿಬೀಜ ಏಕಲೆ... ಎಂಬಂತೆ)

ಆಡಿ ಕಾಲು ದಣಿಯವು ॥
ನೋಡಿ ಕಣ್ಣು ದಣಿಯವು. ಮಾಡಿ ಕೈ ದಣಿಯವು ॥
ಹಾಡಿ ನಾಲಿಗೆ ದಣಿಯದು, ಇನ್ನೇನೆ ॥ ಕಾಲು ದಣಿಯವು ॥
ನಾ, ನಿಮ್ಮ ಕೈಯಾರೆ ಪೂಜಿಸಿ।
ಮನ ದಣಿಯಲೊಲ್ಲದು, ಇನ್ನೇನೆ, ಇನ್ನೇನೆ॥ ಕಾಲುದಣಿಯವು॥
ಕೂಡಲಸಂಗಮದೇವ ಕೇಳಯ್ಯ।
ನಿಮ್ಮುದರವ ಬಗೆದಾನು ಹೊಗುವ ಭರವೆನಗೆ॥ ಕಾಲುದಣಿಯವು॥

(ಬಸವಣ್ಣ)

೬೨

ರಾಗ- ಮಿಶ್ರಪಹಾಡಿ) (ತಾಲ:- ಕವಾಲಿ

(ಧೀರೆ ಗಾಡಿ ಹಾಕರೆ... ಎಂಬಂತೆ)

ತನ್ನ ಕಾನಂದೊಡೆ । ತಾನೇ ಚಿನ್ಮಯನಾದ । ಅಯ್ಯಾ ॥
ಪರಬ್ರಹ್ಮನೋಡಾ । ತಾನೇ ಚಿನ್ನಾದ ।
ಚಿದ್ಬಿಂದು ಚಿತ್ಕಳಾಮೂರ್ತಿ ನೋಡು ।
ತಾನೇ ಸಕಲ । ಚೈತನ್ಯ । ಚಿತ್ಸೂತ್ರಧಾರೀ । ಅಯ್ಯಾ ॥
ತನ್ನಿಂದಧಿಕ ಪರದೈವವಿಲ್ಲ, ನೋಡಾ. ತಾನೇ ಸಚ್ಚಿದಾನಂದ ।
ಸ್ವರೂಪವಾದ ಚಿದ್ಘನಲಿಂಗ ನೋಡಾ ।
ಅಪ್ರಮಾಣ ಕೂಡಲಸಂಗಮದೇವಾ ॥

( ? )

೬೩

ರಾಗ— ಮಿಶ್ರಪಹಾಡಿ) (ತಾಲ— ಧುಮಾಳಿ

[ಜಮುನಾಮೆ ಕೈಸೆ ಜಾವು... ಎಂಬಂತೆ]

ಪರರಾಸೆ ಎಂಬ ಜ್ವರವು ಹತ್ತಿ ।
ನಾನು ಕಳವಳಿಸಿ ನುಡಿವೆನಯ್ಯಾ ॥
ಹೊನ್ನು ಹೆಣ್ಣು ಮಣ್ಣು ಬಯಸಿ ॥ ೧ ॥
ವಿಕಳತೆ ಗೊಂಡಂತೆ ಪ್ರಳಪಿಸುತ್ತ ।
ನುಡಿವೆನಯ್ಯಾ. ಈ ಕಳವಳವ ನಿಲಿಸಿ ॥ ೨ ॥
ಕರುಣಾಮೃತವೆಂಬ ಕಷಾಯುವನೆರೆದು ।
ಪರರಾಸೆಯೆಂಬ ಜ್ವರವ ಮಾಣಿಸು ॥ ೩ ॥
ಬಸವ ಪ್ರಿಯ ಕೂಡಲ ।
ಚನ್ನಸಂಗಮದೇವಾ ದೇವಾ ॥ ೪ ॥

(ಹಡಪದಪ್ಪಣ್ಣ)



೬೪

ರಾಗ- ಮಿಶ್ರಪಹಾಡಿ) (ತಾಲ— ಕವಾಲಿ

[ಮುಜ ಫಿರ ಫಿರುನಿ... ಎಂಬಂತೆ]

ಸಂಸಾರವ ಬಿಟ್ಟುದೇ ।
ಆಚಾರವಯ್ಯಾ ಕಾಯದಿಚ್ಛೆಗ ॥
ಕಂಡವರಿಗೆ ಕಾರ್ಪಣ್ಯಬಡದಿಪ್ಪುದೇ ಶೀಲ ।
ಲಿಂಗಾಣತಿಯಿಂದ ಬಂದುದ ಕೈಕೊಂಬುದೇ ವ್ರತ ॥
ಮನ ಘನವನಗಲದಿಪ್ಪುದೇ ಭಕ್ತಿ ಸಕಳೇಶದೇವ ನಿಮ್ಮ ।
ನರಿದವನೇ ಶರಣ ॥ ೧ ॥

(ಸಕಳೇಶ ಮಾದರಸ)

೬೫

ರಾಗ— ಸುಸಾರಂಗ) (ತಾಲ— ತ್ರಿತಾಲ

[ರೀತ ರಂಜ ಭರಕೆ... ಎಂಬಂತೆ]

ಲಂಚ ವಂಚನೆಗೆ ಕೈಯ್ಯಾನದ ಭಾಷೆ ।
ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದರೆ ॥ಪ॥
ಕಯ್ಯ ಮುಟ್ಟಿ ಎತ್ತಿದೆನಾದೊಡೆ ।
ಅಯ್ಯಾ ನಿಮ್ಮಾಣೆ ನಿಮ್ಮ ಪ್ರಮಥರಾಣೆ ॥೧॥
ನೀನಿಕ್ಕಿದ ಭಿಕ್ಷೆಯೊಳಗಿಪ್ಪೆನಯ್ಯಾ ।
ಶಂಭು ಜಕ್ಕೇಶ್ವರದೇವಯ್ಯಾ ನಿಮ್ಮಾಣೆ ॥೨॥

(ಸತ್ಯಕ್ಕ)

೬೬

ರಾಗ— ದುರ್ಗಾ) (ತಾಲ ತ್ರಿತಾಲ

[ಮನಮನೋಹನ ಮುರಲೀವಾಲಾ... ಎಂಬಂತೆ]

ಹೊಲೆಯು ಹೊಲಬಿನಾದೊಡೆ।
ಅವನ ಹೊರೆಯುಲಿಪ್ಪುದು ಲೇಸು ॥ಪ॥

ಹೊಲಬುಗೆಡದೆ ಲಿಂಗ ಶರಣೆನ್ನಿರಯ್ಯಾ।
ಹೊಲಬುಗೆಡಬೇಡ ಶಿವಶರಣೆನ್ನಿರಯ್ಯಾ ॥೧॥

ನಮ್ಮ ಕೂಡಲಸಂಗನ ಮಹಾಮನೆಯಲು।
ಮಾದಾರ ಚನ್ನಯ್ಯ ಹೊಲಬಿಗನಯ್ಯಾ ॥೨॥

(ಬಸವಣ್ಣ

೬೭

ರಾಗ- ಭೈರವಿ) (ತಾಲ- ತ್ರಿತಾಲ

[ಹರನೇ ಗೋವಿನ ಜನ್ಮವು ಸಾಕು... ಎಂಬಂತೆ]

ಲೋಕದ ಡೊಂಕ ನೀವೇಕೆ ತಿದ್ದುವಿರಿ।
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ ॥ಪಲ್ಲ॥

ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ।
ನೆರೆಮನೆಯ ದುಃಖಕ್ಕೆ ಅಳುವರ।
ಮೆಚ್ಚ, ಕೂಡಲಸಂಗಮದೇವಾ ॥೨॥

(ಬಸವಣ್ಣ)



೬೮

[ಟೀಪ:— ಕಲಿಯುವವರಿಗೆ ಸುಲಭವಾಗಬೇಕೆಂದು ಸ್ವರಸಹಿತವಾಗಿ ಒಂದು ಪದವನ್ನು ಕೆಳಗೆ ಕೊಟ್ಟಿರುತ್ತದೆ. ಇದರ ಸ್ವರಸಂಯೋಜಕರು ಸೊಲ್ಲಾಪುರದ ಸಂಗೀತ ಕಲಾಮಂದಿರದ ಶ್ರೀ. ವಿ. ಪಿ. ಬೋರಾಮಣಿಯವರು ಮತ್ತು ಅವರಿಗೆ ಸಹಾಯಕರು ಶ್ರೀ. ಪಿ. ವ್ಹಿ. ಪಾಟೀಲ ಸಂಗೀತ ಶಿಕ್ಷಕ ಇವರು ಇದ್ದಾರೆ.— ಸಂಪಾದಕ.]

(ರಾಗಿಣಿ— ಜಯಜಯವಂತಿ)

ಈ ರಾಗಿಣಿಯ ಸ್ವರೂಪವು ದೇಸ, ಛಾಯಾ ಮತ್ತು ಅಲಯ್ಯಾ ರಾಗಗಳಿಗೆ ಬಹುಮಟ್ಟಿಗೆ ಸರಿಹೋಲುತ್ತಿದ್ದು ಎರಡೂ ಗಂಧಾರಗಳಿಂದ ಈ ರಾಗಿಣಿಯು ಅವುಗಳಿಂದ ವಿಂಗಡಿಸಲ್ಪಡುತ್ತದೆ. ಆರೋಹಾವರೋಹಷಾಡವ— ಸಂಪೂರ್ಣ ವಕ್ರಗತಿಯಿಂದ ಮಾಡಲ್ಪಡುತ್ತದೆ. ಆರೋಹದಲ್ಲಿ ಧೈವತ ವರ್ಜ್ಯ.

ಹಾಡುವ ಸಮಯ ರಾತ್ರಿಯ ಎರಡನೆಯ ಪ್ರಹರವು.

ಆರೋಹ:— ಸಾ ಧ ನಿ ರಿ ಗ ಮ ಪ ಮ ಗ ರಿ ಮ ಪ ನಿ ಸಾ

ಅವರೋಹ:— ಸಾ ನಿ ಧ ಪ ಮ ಗ ರಿ ಗ ರಿ ಸಾ.

**ಸ್ವರಲೇಖನ ಸಂಕೇತ.**

(೧) ಯಾವ ಸ್ವರದ ಕೆಳಗೆ ೦ ಈ ಚಿನ್ಹವಿರುವದೋ ಅದು ಮಂದ್ರ ಸಪ್ತಕದಲ್ಲಿಯ ಸ್ವರವೆಂದು ತಿಳಿಯಬೇಕು.

ಉದಾ:— ಮ ಪ ಧ ನಿ

(೨) ಚಿನ್ಹಗಳಿಲ್ಲದ ಸ್ವರಗಳು ಮಧ್ಯ ಸಪ್ತಕದವೆಂದು ತಿಳಿಯಬೇಕು.

ಉದಾ:— ಸಾ ರಿ ಗ ಮ

(೩) ಸ್ವರದ ಮೇಲೆ । ಈ ಚಿನ್ಹವಿದ್ದರೆ ಅದು ತಾರ ಸಪ್ತಕದ ಸ್ವರವೆಂದು ತಿಳಿಯಬೇಕು. ಉದಾ— ಸಾ̍ ರಿ̍ ಗ̍

(೪) ಕೋಮಲ ಸ್ವರಗಳಿಗಾಗಿ ಸ್ವರಗಳ ಕೆಳಗೆ — ಈ ಚಿನ್ಹವು ಕೊಡಲ್ಪಟ್ಟಿದೆ. ಉದಾ:— ರಿ̱ ಗ̱ ಮ̱

(೫) ಸ್ವರದ ಮುಂದೆ ಽ ಈ ಚಿನ್ಹವಿದ್ದರೆ ಅದನ್ನು ಒಂದು ಮಾತ್ರೆಯಿಂದ ಹೆಚ್ಚಿಸಬೇಕು. ಒಂದಕ್ಕಿಂತ ಹೆಚ್ಚು ಚಿನ್ಹಗಳಿದ್ದರೆ ಆ ಸ್ವರ ಅಥವಾ ಅಕ್ಷರವನ್ನು ಅಷ್ಟು ಕಾಲದ ವರೆಗೆ ಹೆಚ್ಚಿಸಬೇಕು

ಉದಾ:— ರಿ ಽ, ಗ ಽ ಽ, ಮ ಽ ಽ ಽ.

(೬) ಯಾವ ಸ್ವರಗಳ ಕೆಳಗೆ ‿ ಈ ಚಿನ್ಹವಿರುವದೋ ಆ ಸ್ವರಗಳನ್ನು ಒಂದೇ ಮಾತ್ರೆಯ ಕಾಲದಲ್ಲಿ ಅನ್ನಬೇಕು.

ಉದಾ:— ರಿಗ ಮಪ ಪಧ.

—ತಾಲ ಸಂಕೇತ—

ಸಮ ಪೆಟ್ಟು ಹುಸಿ
\+ — ೦

ಉದಾ:—

| | | | | | | | | | | | |
|---|---|---|---|---|---|---|---|---|---|---|---|
| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ | ೧೧ | ೧೨ |
| ಧಿನ್ | ಧಿನ್ | ಧಾಗೆ | ತ್ರಕ | ತು | ನಾ | ಕತ್ | ತಾ | ಧಾಗೆ | ತ್ರಕ | ಧೀ | ನಾ |
| + | | ೦ | | — | | | | | | — | |

ರಾಗಿಣಿ:— ಜಯಜಯವಂತಿ.

ತಾಲ:— ದೃತ ಏಕತಾಲ

ಪದ:— ತಂದೆ ನೀನು, ತಾಯಿ ನೀನು ।
(ವಚನ) ಬಂಧು ನೀನು, ಬಳಗ ನೀನು ॥ಪ॥
ನೀನಲ್ಲದೆ ಮತ್ತಾರು, ಇಲ್ಲವಯ್ಯಾ ।
ಕೂಡಲಸಂಗಮದೇವಾ । ಹಾಲಲದ್ದು ನೀರಲದ್ದು ॥೧॥

—ಬಸವಣ್ಣ.



| | | | | | | | | | | | |
|---|---|---|---|---|---|---|---|---|---|---|---|
| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ | ೧೧ | ೧೨ |
| ಧಿನ್ | ಧಿನ್ | ಧಾಗೆ | ತ್ರಕ | ತು | ನಾ | ಕತ್ | ತಾ | ಧಾಗೆ | ತ್ರಕ | ಧೀ | ನಾ |
| + | | ೦ | | — | | ೦ | | — | | — | |
| ರಿ | ಽ | ರಿ | ಮ | ಗ | ರಿ | ಸಾ | ನಿ | ಸಾ | ನಿ | ಧ | ನಿ |
| ತಂ | ಽ | ದೆ | ನೀ | ಽ | ನು | ತಾ | ಽ | ಯಿ | ನೀ | ಽ | ನು |
| ರಿ | ಗ | ಮ | ಪ | ಗ | ಮ | ರಿ | ಗ | ರಿ | ಸಾ | ಧ | ನಿ |
| ಬಂ | ಽ | ಧು | ನೀ | ಽ | ನು | ಬ | ಳ | ಗ | ನೀ | ಽ | ನು |
| ಮ | ಪ | ನೀ | ಽ | ನೀ | ನೀ | ಸಾ | ನಿ | ಸಾ | ಸಾ | ಽ | ಽ |
| ನೀ | ಽ | ನ | ಽ | ಲ್ಲ | ದೆ | ಮ | ಽ | ತ್ತಾ | ರು | ಽ | ಽ। |
| ನಿ | ಸಾ | ರಿ | ಽ | ರಿ | ಽ | ಸಾ | ನಿ | ಧ | ಪ | ಮಗ | ಮ |
| ಇ | ಲ್ಲ | ವ | ಽ | ಯ್ಯಾ | ಽ | ಽ | ಽ | ಽ | ಽ | ಽ | ಽ |
| ಗ | ಮ | ನಿ | ಧ | ಪ | ಮ | ಗ | ಮ | ರಿ | ಗರಿ | ಸಾ | ನಿಸಾ |
| ಕೂ | ಽ | ಡ | ಲ | ಸಂ | ಽ | ಗ | ಮ | ದೇ | ಽಽ | ವಾ | ಽಽ |
| ರಿ | ಗ | ಮ | ಪ | ಗ | ಮ | ರಿ | ಗ | ರಿ | ಸಾ | ಧ | ನಿ |
| ಹಾ | ಽ | ಲ | ಲ | ಽ | ದ್ದು | ನೀ | ಽ | ರ | ಲ | ಽ | ದ್ದು |

೬೯

ರಾಗ— ಕಾಫಿ)    (ತಾಲ— ತ್ರಿತಾಲ

[ರಾಮಸಖಾ ಕುಣೆ ದಾವಾ...ಎಂಬಂತೆ]

ನಾದಪ್ರಿಯ ಶಿವನೆಂಬರು, ಅಯ್ಯಾ।
ನಾದಪ್ರಿಯ ಶಿವನಲ್ಲಯ್ಯಾ।
ವೇದಪ್ರಿಯ ಶಿವನೆಂಬರು ॥ಪ॥

ವೇದಪ್ರಿಯ ಶಿವನಲ್ಲಯ್ಯಾ।
ನಾದವ ಮಾಡಿದ ರಾವಣಂಗೆ।
ಅರೆಯಾಯುಷ್ಯವಾಯಿತ್ತು।
ವೇದವನೋದಿದ ಬ್ರಹ್ಮನ ಶಿರ ಹೋಯಿತ್ತು।
ನಾದ ಪ್ರಿಯನು ಅಲ್ಲ, ವೇದ ಪ್ರಿಯನು ಅಲ್ಲ।
ಭಕ್ತಿ ಪ್ರಿಯ ಕೂಡಲಸಂಗಮದೇವಾ ॥೧॥

(ಬಸವಣ್ಣ)

೭೦

ರಾಗ— ಮಿಶ್ರಪಹಾಡಿ)    (ತಾಲ— ಕವಾಲಿ

[ರಾಮ ವನಿ ಜಾಯಿ... ಎಂಬಂತೆ]

ತನುವ ಬೇಡಿದಡೀವೆ। ಅಯ್ಯಾ।
ಮನವ ಬೇಡಿದಡೀವೆ। ಅಯ್ಯಾ ॥ಪ॥

ಧನವ ಬೇಡಿದಡೀವೆ ನಿಮ್ಮ ಶರಣರಿಗೆ।
ಎನಗೆ ಬೇಕೆಂಬ ಭಾವ।



ಮನದಲ್ಲಿ ಹೊಳೆದರೆ ಘನಮಹಿಮ।
ನಿಮ್ಮ ಶರಣರ ಪಾದದಾಣೆ, ಅಯ್ಯಾ ॥೧॥

ಮನ ವಚನ ಕಾಯಂದೊಳು ನೀನಲ್ಲದೆ।
ಮತ್ತೊಂದನರಿದಡೆ।
ಕೂಡಲಸಂಗಮದೇವಾ ಮತ್ತೆ।
ಮರಳಿ ಭವವೆಂಬ ಘೋರದಲ್ಲಿಕ್ಕಯ್ಯಾ ॥೨॥

(ಬಸವಣ್ಣ)

೭೧

ರಾಗ— ಮಿಶ್ರಪಹಾಡಿ)    (ತಾಲ— ಕವಾಲಿ

[ಜಮುನಾಮೆ ಕೈಸೆ ಜಾವು .. ಎಂಬಂತೆ]
ತಾಳ ಮಾನ ಸರಸವನರಿಯೆ ॥ಪ॥

ಓಜೆ ಬಜಾವಣೆಯ ಲೆಕ್ಕವನರಿಯೆ।
ಅಮೃತಗಣ ದೇವಗಣವನರಿಯೆ ॥೧॥

ಕೂಡಲಸಂಗಮದೇವ ನಿನಗೆ।
ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ ॥೨॥

(ಬಸವಣ್ಣ)

೭೨

ರಾಗಿಣಿ— ಜಯಜಯವಂತಿ)    (ತಾಲ— ತ್ರಿತಾಲ

[ಮೋರೆ ಮಂದರ ಅಬಹು ನಹಿ ಆಯೆ...ಎಂಬಂತೆ]

ಎನ್ನ ಕಾಯವ ದಂಡಿಗೆಯ ಮಾಡಯ್ಯಾ।
ಎನ್ನ ಶಿರವ ಸೋರೆಯ ಮಾಡಯ್ಯಾ ॥ಪ॥

ಎನ್ನ ನರವ ತಂತಿಯ ಮಾಡಯ್ಯಾ ।
ಎನ್ನ ಬೆರಳ ಕಡ್ಡಿಯ ಮಾಡಯ್ಯಾ ॥೧॥
ಬತ್ತೀಸ ರಾಗವ ಹಾಡಯ್ಯಾ ।
ಉರದಲೊತ್ತಿ ಬಾರಿಸು ಕೂಡಲಸಂಗಮದೇವಾ ॥೨॥

(ಬಸವಣ್ಣ)

೭೩

ರಾಗ— ಬಸಂತ) (ತಾಲ— ಏಕತಾಲ

[ಪಶುಪತೆ ಗಿರಿಜಾಪತೆ...ಎಂಬಂತೆ]

ಮನೆ ನೋಡಾ ಬಡವರು । ಮನ ನೋಡಾ ಸಂಪನ್ನರು ॥ಪ॥
ಧನ ನೋಡಾ ಬಡವರು । ಘನಮನ ಸಂಪನ್ನರು ॥ಅ ಪ॥

ಕೂಡಲಸಂಗನ ಶರಣರು । ಕರುಳಿಲ್ಲದ ಕಲಿಗಳು ।
ಆರಿಗೂ ಉಪಮಿಸಬಾರದು ॥೧॥

(ಬಸವಣ್ಣ)

೭೪

(ಶೋಧನ ಪದದಂತೆ.)

ಚಿಲಿಮಿಲಿ ಎಂದೋದುವ ಗಿಳಿಗಳಿರಾ, ನೀವು ಕಾಣಿರೇ, ನೀವು ಕಾಣಿರೇ ।
ಕೊಳನ ತಡಿಯುಲಾಡುವ ಹಂಸೆಗಳಿರಾ, ನೀವು ಕಾಣಿರೇ, ನೀವು ಕಾಣಿರೇ ।
ಸರವೆತ್ತಿ ಪಾಡುವ ಕೋಗಿಲೆಗಳಿರಾ, ನೀವು ಕಾಣಿರೇ, ನೀವು ಕಾಣಿರೇ ॥ಪ॥

ಬಸವ ಪಥ
Regd News Paper
"Licenced to Post without prepayment vide
Postal Regd No. CPMG / KA / BG
GPO-416 / 2003-05 / WPP-69"
ಬಸವ ಪಥ
ಬಸವ ಭವನ, ಶ್ರೀ ಬಸವೇಶ್ವರ ವೃತ್ತ, ಬೆಂಗಳೂರು - ೫೬೦ ೦೦೧